ಸಂಪುಟ : 9 ಸಂಚಿಕೆ 10 ಪುಟ : 4 ಬೆಲೆ : 3.00 ಮಂಗಳವಾರ ಫೆಬ್ರವರಿ 6, 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ...

VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 9 Issue : 10 Pages : 4 Price : 3.00 Tuesday February 6, 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

### 15-20 ದಿನಗಳಿಗೊಮ್ಮೆ ಕುಡಿಯುವ ನೀರು | ಯಾರಿಗೆ ಹೇಳೋಣ ನಮ್ಮ ಗೋಳು | ರಿಪೇರಿ ಕಾರ್ಯದಿಂದ ಹೈರಾಣಾದ ಇಲಾಖೆ

# ನೀರಿನಂತೆ ಹಣ ಖರ್ಚು ಮಾಡಿದರೂ ನೀಗದ ಬವಣೆ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಗದಗ ಜಿಲ್ಲೆಯಲ್ಲಿಯೇ ತೀವ್ರಗತಿಯಲ್ಲಿ ಅಭಿವೃದ್ಧಿ ಹೊಂದುತ್ತಿರುವ ಲಕ್ಷ್ಮೇಶ್ವರ ಪಟ್ಟಣಕ್ಕೆ 15-20 ದಿನಗಳಿಗೊಮ್ಮೆ ಕುಡಿಯುವ ನೀರು ಸರಬರಾಜಾಗುತ್ತಿದೆ. ಕಳೆದ ನಾಲ್ಕೈದು ವರ್ಷಗಳಿಂದ ಪಟ್ಟಣದ ಜನತೆ ನೀರಿಗಾಗಿ ಪರಿತಪಿಸುವ ಸ್ಥಿತಿ ದಿನೇ ದಿನೇ ಉಲ್ಬಣವಾಗುತ್ತಿದೆ. 2011ರ ಜನಗಣತಿಯ ಪ್ರಕಾರ ಪ್ರತಿ ಮನುಷ್ಯನಿಗೆ ನಿತ್ಯ 20 ಲೀ ನೀರಿನಂತೆ ಪಟ್ಟಣಕ್ಕೆ ದಿನಕ್ಕೆ 5.6 ಎಂಎಲ್‌ಡಿ ನೀರು ಅಗತ್ಯವಿದೆ. ಆದರೆ ಸದ್ಯ ಸರಬರಾಜಾಗುತ್ತಿರುವುದು 4 ಎಂಎಲ್‌ಡಿ ನೀರು ಮಾತ್ರ.

ಸದ್ಯ ಅಂದಾಜು 50 ಸಾವಿರ ಜನಸಂಖ್ಯೆ ಹೊಂದಿರುವ ಪಟ್ಟಣಕ್ಕೆ 40 ಕಿ.ಮೀ ದೂರದ ತುಂಗಭದ್ರಾ ನದಿಯಿಂದ ಕುಡಿಯುವ ನೀರು ಸರಬರಾಜಾಗುತ್ತದೆ. ಆದರೆ ಕಳೆದ 22 ವರ್ಷಗಳ ಹಿಂದೆ ಕೆಯುಡಬ್ಲ್ಯೂಎಸ್ (ಕರ್ನಾಟಕ ನಗರ ನೀರು ಸರಬರಾಜು ಮಂಡಳಿ)ಯಿಂದ ಅಳವಡಿಸಲಾಗಿದ್ದ ಪೈಪ್‌ಲೈನ್ ದುರಸ್ಥಿ ಮಾಡಲಾರದಷ್ಟು ಹಾಳಾಗಿದೆ. ನದಿಯಿಂದ ಪಟ್ಟಣಕ್ಕೆ ನೀರು ಸರಬರಾಜಾಗುವ ಮಾರ್ಗದಲ್ಲಿಯೇ ಯಥೇಚ್ಛವಾಗಿ ನೀರು ಪೋಲಾಗುತ್ತಿದೆ. ನದಿ ಪಾತ್ರದ ಮೇವುಂಡಿ ಪಂಪ್‌ಹೌಸ್, ಸೂರಣಗಿ ಶುದ್ಧೀಕರಣ ಘಟಕದ ಯಂತ್ರೋಪಕರಣಗಳೂ ಪದೇ ಪದೇ ರಿಪೇರಿಗೆ ಬರುತ್ತಿವೆ.

ಈ ಮೊದಲು 8 ದಿನಗಳಿಗೊಮ್ಮೆ ಬರುತ್ತಿದ್ದ ನೀರು ಸದ್ಯ 15 ದಿನಗಳ ಅವಧಿಯಲ್ಲಿ ಬರುತ್ತದೆ. ನೀರು ಕೊಡಲೇಬೇಕಾದ ಅನಿವಾರ್ಯತೆಯಿಂದ ಪುರಸಭೆ ನೀರಿನಂತೆಯೇ ಲಕ್ಷಾಂತರ ರೂ. ಖರ್ಚು ಮಾಡುತ್ತಿದೆ. ಆದರೆ ಇದು ಹರಿದ ಬಟ್ಟೆಗೆ ತೇಪೆ ಹಾಕಿದಂತಾಗುತ್ತಿದ್ದು, ನೀರಿನ ಬವಣೆ ಮಾತ್ರ ತಪ್ಪುತ್ತಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ ನದಿಯಲ್ಲಿ ನೀರಿನ ಕೊರತೆ, ವಿದ್ಯುತ್ ಸರಬರಾಜಿನಲ್ಲಿ ತೊಂದರೆ, ಹಳೆಯದಾದ ಯಂತ್ರೋಪಕರಣಗಳು, ತೂತು ಬಿದ್ದಿರುವ ಪೈಪ್‌ಲೈನ್, ಸಿಬ್ಬಂದಿ ಕೊರತೆ ಎಲ್ಲವನ್ನೂ ಗಮನಿಸಿದರೆ ನೀರಿನ ಸಮಸ್ಯೆ ಬಗೆಹರಿಯುವ ಲಕ್ಷಣಗಳಿಲ್ಲ. ತುಂಗಭದ್ರಾ ನದಿಯಿಂದ ನೀರೆತ್ತುವ ಪಂಪ್‌ಹೌಸ್, ಜಾಕ್‌ವೆಲ್ ಇರುವುದು ಹಾವೇರಿ ಸರಹದ್ದಿನಲ್ಲಿ. ಇಲ್ಲಿ ಏನೇ ಸಮಸ್ಯೆಗಳಿದ್ದರೂ ಅ ಭಾಗದ ಜಿಲ್ಲಾಧಿಕಾರಿಗಳ ಗಮನಕ್ಕೆ ತರಬೇಕು. ಪರಿಸ್ಥಿತಿ ಹೀಗೆಯೇ ಮುಂದುವರೆದರೆ ಪಟ್ಟಣದ ಜನತೆಗೆ ಯಾವಾಗಲಾದರೂ ನದಿ ನೀರು ಸರಬರಾಜು ಸ್ಥಗಿತಗೊಳ್ಳಬಹುದು ಎಂಬ ಆತಂಕ ಜನರನ್ನು ಕಾಡುತ್ತಿದೆ.

ಪಟ್ಟಣದ ಬಹುತೇಕ ವಾರ್ಡುಗಳಲ್ಲಿ ಅಳವಡಿಸಿದ ಸಾರ್ವಜನಿಕ ನಳಗಳೇ ಜನತೆಗೆ ಆಸರೆಯಾಗಿವೆ. ಪಟ್ಟಣ ವ್ಯಾಪ್ತಿಯಲ್ಲಿ 114 ಬೋರ್‌ವೆಲ್ ಇದ್ದು, ಅದರಲ್ಲಿ 90 ಬೋರ್ ಕಾರ್ಯನಿರ್ವಹಿಸುತ್ತಿವೆ. ಬೋರ್‌ವೆಲ್‌ಗಳ ನೀರಿನ ಮಟ್ಟವೂ ಕುಸಿಯುತ್ತಿದ್ದು, ಜನತೆ ಸಾರ್ವಜನಿಕ ನಳಗಳ ಮುಂದೆ ರಾತ್ರೋರಾತ್ರಿ ಕ್ಯೂ ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗಿದೆ. ರೈತ ಕುಟುಂಬದವರಂತೂ ನೀರಿಗಾಗಿ ಪರಿತಪಿಸುತ್ತಿದ್ದಾರೆ. ಪುರಸಭೆ ನಿರ್ವಹಿಸುವ ಆರ್‌ಓ ಪ್ಲ್ಯಾಂಟ್ ಕಾರ್ಯ ನಿಲ್ಲಿಸಿದ್ದು, ಖಾಸಗಿಯವರು ಮಾರಾಟ ಮಾಡುವ ಶುದ್ಧ ಕುಡಿಯುವ ನೀರಿನ ಬೆಲೆ ಹೆಚ್ಚಳವಾದರೂ ಘಟಕಗಳ ಮುಂದೆ ಸರತಿ ಸಾಲು ಇರುತ್ತದೆ. ಅಲ್ಲದೇ ಟ್ಯಾಂಕರ್ ನೀರಿನ ಬೆಲೆ ಹೆಚ್ಚಳವಾದರೂ ಡಿಮ್ಯಾಂಡ್ ಹೆಚ್ಚಿದೆ.



ಹೊಸ ಪೈಪಲೈನ್ ಅಳವಡಿಕೆಗೆ ಡಿಪಿಆರ್ ಸಿದ್ಧಪಡಿಸುವಂತೆ ಕೆಯುಡಬ್ಲ್ಯೂಎಸ್ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. 30 ವರ್ಷಗಳ ಅವಧಿಯ ಯೋಜನೆ 10 ವರ್ಷ ಮೊದಲೇ ಹಾಳಾಗಿದೆ ಎಂದು ಕೆಯುಡಬ್ಲೂಡಎಸ್‌ನ ಅಧಿಕಾರಿಗಳು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಹಿಂದೇಟು ಹಾಕುತ್ತಿದ್ದಾರೆ. ಇತ್ತೀಚೆಗೆ ನಡೆದ ಕೆಡಿಪಿ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಅಮೃತ 0.2 ಯೋಜನೆಯಲ್ಲಿ ಅನುದಾನ ಕಲ್ಪಿಸುವ ಭರವಸೆ ನೀಡಿದ್ದಾರೆ. ಸಚಿವರ ಸೂಚನೆಯಂತೆ ಅಮೃತ 0.2 ಯೋಜನೆಯಲ್ಲಿನ 33.73 ಕೋಟಿ ರೂ ಅನುದಾನ ಬಳಕೆಯ ಜತೆಗೆ ಹೆಚ್ಚುವರಿ 20 ಕೋಟಿ ರೂ ಬೇಕಾಗುತ್ತದೆ. ಹೊಸ ಪೈಪ್‌ಲೈನ್‌ಗೆ ಅನುದಾನ ತರುವ ನಿಟ್ಟಿನಲ್ಲಿ ಸಚಿವರು ಮತ್ತು ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದ್ದು, ಸತತ ಪ್ರಯತ್ನ ಮಾಡಲಾಗುತ್ತಿದೆ.

**– ಡಾ.ಚಂದ್ರು ಲಮಾಣಿ.**
ಶಾಸಕರು, ಶಿರಹಟ್ಟಿ.


ತುಂಗಭದ್ರಾ ನದಿಯಿಂದ ಲಕ್ಷ್ಮೇಶ್ವರಕ್ಕೆ ಪ್ರತ್ಯೇಕ ಕುಡಿಯುವ ನೀರಿನ ಪೈಪ್‌ಲೈನ್ ಯೋಜನೆಗಾಗಿ ಡಿಪಿಆರ್ ಸಿದ್ದಪಡಿಸಿ ಅನುದಾನ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸಲಾಗುತ್ತಿದೆ. ಲಕ್ಷ್ಮೇಶ್ವರಕ್ಕೆ ಪ್ರತ್ಯೇಕ ಪೈಪ್‌ಲೈನ್‌ಗೆ 53 ಕೋಟಿ ರೂ ಅನುದಾನ ಅಂದಾಜಿಸಲಾಗಿದೆ. ಈ ಬಗ್ಗೆ ಸಚಿವರು ಮತ್ತು ಕ್ಷೇತ್ರದ ಶಾಸಕರೊಂದಿಗೆ ಚರ್ಚಿಸಿ ಅವರ ಹಾಗೂ ಕೆಡಿಪಿ ಮತ್ತು ಪುರಸಭೆಯ ಅನುಮೋದನಾ ಪತ್ರದೊಂದಿಗೆ ಅನುದಾನ ಮಂಜೂರಾತಿಗೆ ಕೆಯುಡಬ್ಲೂಎಸ್‌ನ ಕೇಂದ್ರ ಕಚೇರಿಗೆ ಪ್ರಸ್ತಾವನೆ ಸಲ್ಲಿಸಲಾಗುವುದು.

**– ಜಗದೀಶ ಬಿ ಹೊಸಮನಿ.**
ಕೆಯುಡಬ್ಲೂಎಸ್ ಎಇಇ, ಗದಗ.



ಭವಿಷ್ಯದ ದೃಷ್ಟಿಯಿಂದ ಕೂಡಲೇ ಪಟ್ಟಣಕ್ಕೆ ತುಂಗಭದ್ರಾ ನದಿಯಿಂದ ಪ್ರತ್ಯೇಕ ಕುಡಿಯುವ ನೀರಿನ ಯೋಜನೆ ಸಾಕಾರಗೊಳ್ಳಬೇಕಿದೆ. ಈ ಕಾರ್ಯ ಕೇವಲ ಅಧಿಕಾರಿಗಳು ಮತ್ತು ಸ್ಥಳೀಯ ಜನಪ್ರತಿನಿಧಿಗಳಿಂದ ಕಷ್ಟ ಸಾಧ್ಯ. ಈ ಭಾಗದ ಸಚಿವರು, ಶಾಸಕರು ಹೆಚ್ಚಿನ ಮುತುವರ್ಜಿ ವಹಿಸಿ ಸರ್ಕಾರದಿಂದ ಯೋಜನೆ ಸಾಕಾರಗೊಳಿಸುವ ಭಗೀರಥ ಪ್ರಯತ್ನವೇ ಆಗಬೇಕಿದೆ. ಇಲ್ಲದಿದ್ದರೆ ನೀರಿಗಾಗಿ ಪರದಾಟ, ಪರಿತಪಿಸಬೇಕಾದ ಪರಿಸ್ಥಿತಿ ದಿನೇ ದಿನೇ ಉಲ್ಬಣಿಸಿ ಜನತೆ ನೀರಿಗಾಗಿ ಬೀದಿಗಿಳಿಯುವ ಪರಿಸ್ಥಿತಿ ನಿರ್ಮಾಣವಾಗಬಹುದು.

**– ಮಂಜುನಾಥ ಮಾಗಡಿ.**
ಸ್ಥಳೀಯ ನಿವಾಸಿ.



ನದಿ ನೀರು ಕಡಿಮೆಯಾಗಿದ್ದರಿಂದ ರೈತರು ಪಂಪ್‌ಸೆಟ್ ಬಳಸದಂತೆ ಮತ್ತು ಭದ್ರಾ ಜಲಾಶಯದಿಂದ ನದಿಗೆ ನೀರು ಬಿಡುವಂತೆ ಜಿಲ್ಲಾಧಿಕಾರಿಗಳು ಪತ್ರ ಬರೆದಿದ್ದಾರೆ. ಜಾಕ್‌ವೆಲ್‌ಗೆ ನೀರು ಬರುವ ಮಾರ್ಗ ಸರಿಪಡಿಸಲಾಗಿದೆ. ಪೈಪ್‌ಲೈನ್ ಸಂಪೂರ್ಣ ಹಾಳಾಗಿರುವುದೇ ನೀರಿನ ಸಮಸ್ಯೆ ಹೆಚ್ಚಲು ಕಾರಣ. ಈ ಬಗ್ಗೆ ಶಾಸಕರು, ಮಾಜಿ ಶಾಸಕರು, ಪುರಸಭೆ ಆಡಳಿತ ಮಂಡಳಿ ಹೊಸ ಪೈಪ್‌ಲೈನ್‌ಗೆ ಸರ್ಕಾರಕ್ಕೆ ಮನವಿ ಮಾಡಿದೆ. ಈ ಬಗ್ಗೆ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಅಮೃತ 0.2 ಯೋಜನೆಯಲ್ಲಿ ಹೊಸ ಪೈಪ್‌ಲೈನ್ ಅಳವಡಿಕೆಗೆ ಡಿಪಿಆರ್ ಸಿದ್ಧಪಡಿಸುವಂತೆ ಕೆಯುಡಬ್ಲೂಎಸ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

**– ಶಂಕರ ಹುಲ್ಲಮ್ಮನವರ.**
ಪುರಸಭೆ ಮುಖ್ಯಾಧಿಕಾರಿ.

## ಇಂದಿನ ನೀರು ಪೂರೈಕೆ ವಿವರ

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಬೆಟಗೇರಿ ಅವಳಿ ನಗರದಲ್ಲಿ ಫೆಬ್ರವರಿ 6ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

ಸ್ಥಳಗಳ ವಿವರ : ವಾರ್ಡ್ ನಂ. 8, 9, 10ರಲ್ಲಿ ಹೆಲ್ತ್ ಕ್ಯಾಂಪ್ ಕಬಾಡಿ ರಸ್ತೆ, ಮಜ್ಜಿಗೆಯವರ ಲೈನ್, ತೆಗ್ಗಿನ್ ಪ್ಲಾಟ್ ಓಣಿ, ಮಲ್ಲಯ್ಯಕಟ್ಟಿ, ಕುರಹಟ್ಟಿ ಪೇಟೆ, ಗದಗಿನ ಅವರ ಮನೆಯ ಸಂಧಿ, ಬೋರೇಗಾರ ಓಣಿ, ನೀಲಕಂಠ ಮಠ ಹಿಂದಿನ ಭಾಗ, ವಾರ್ಡ್ ನಂ. 29ರಲ್ಲಿ ರಾಜೀವ ಗಾಂಧಿ ನಗರ, ವಾರ್ಡ್ ನಂ.15,16, 17 ಮೀನದ ಮಾರ್ಕೆಟ್, ಡಿಸಿ ಮಿಲ್ ರಸ್ತೆ, ಗಣೇಶಗುಡಿ, ಬಸವೇಶ್ವರ ಗುಡಿ ಲೈನ್, ಮಹೇಂದ್ರಕರ್ ಸರ್ಕಲ್ ರಸ್ತೆ, ಗಾಂಧಿ ಸರ್ಕಲ್ ರಸ್ತೆ, ಅಂಗನವಾಡಿ ಲೈನ್, ಶುದ್ಧ ಕುಡಿಯುವ ನೀರಿನ ಘಟಕದ ಸುತ್ತ ಮುತ್ತಲಿನ ಲೈನ್, ಉಳಿದ ಕೆಲವು ಭಾಗಗಳು ವಾರ್ಡ್ ನಂ. 28ರಲ್ಲಿ ದೇವಗಿರಿ ಮಾಸ್ತರ್ ಲೈನ್, ಅಬ್ಬಿಗೇರಿ ಅವರ ಲೈನ್, ಕೃಷ್ಣ ಟ್ಯೂಷನ್ ಲೈನ್, ಸೋಲಾಪಟ್ಟಿ ಅವರ ಲೈನ್, ವಾರ್ಡ್. 21, 23, 20 ರಲ್ಲಿ ಜಂತ್ಲಿ ಅವರ ಲೈನ್, ಕುಂಬಾರ ಲೈನ್, ದ್ಯಾಮನಕಟ್ಟಿ ಲೈನ್, ಗಂಜಿ ಬಸವೇಶ್ವರ ಸರ್ಕಲ್, ಪಡಗದವರ ಲೈನ್, ಹನುಮನ ಗರಡಿ ಲೈನ್, 3ನೇ ನಂಬರ್ ಶಾಲೆ, ದ್ರೌಪದಿ ಬಾಯಿ ಲೈನ್, ವಾರ್ಡ್ ನಂ. 35ರಲ್ಲಿ ರಾಮನಗರ, ಬಾಪೂಜಿ ನಗರ, ವಾರ್ಡ್ ನಂ. 31, 32 ರಲ್ಲಿ ದಾಸರ ಓಣಿ, ಭಜಂತ್ರಿ ಓಣಿ, ಸಿಕ್ಕಲಗಾರ ಓಣಿ, ಏಳು ಮಕ್ಕಳ ಗುಡಿ ಲೈನ್, ಹಳೆ ಕಚೇರಿ ರಸ್ತೆ, ಲಕ್ಷ್ಮೀ ಗುಡಿ ಲೈನ್, ಝುಂಡಾಕಟ್ಟಿ, ತ್ರಿಕೋಟೇಶ್ವರ ರಸ್ತೆ, ಸುಣಗಾರ ಓಣಿ ಲೈನ್, ರಂಗನವಾಡ, ಒಂದನೆ ನಂಬರ್ ಶಾಲೆ, ಗುಜ್ಜರ ಬಸ್ತಿ ಲೈನ್, ಕೋಳಿಕೇರಿ ಮೂಲಿ ಲೈನ್ ಉಳಿದ ಕೆಲವು ಭಾಗಗಳು...

ಈಗಾಗಲೇ ಕುಡಿಯುವ ನೀರಿನ ನಳ ಹೊಂದಿರುವ ಬಾಕಿದಾರರ ಪಟ್ಟಿ ತಯಾರಿಸಿದ್ದು, ನಾಗರಿಕರು ಕೂಡಲೇ ತಮ್ಮ ಕುಡಿಯುವ ನೀರಿನ ಬಾಕಿ ಕರವನ್ನು ಸಂದಾಯ ಮಾಡುವಂತೆ ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕಾಯಕ ಶರಣರ ಜಯಂತಿ: ಇಂದು ಪೂರ್ವಭಾವಿ ಸಭೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಫೆಬ್ರವರಿ 10ರಂದು ಆಚರಿಸಲಾಗುವ ಕಾಯಕ ಶರಣರ ಜಯಂತಿ ನಿಮಿತ್ತ ಫೆಬ್ರವರಿ 6 ರಂದು ಸಂಜೆ 4 ಗಂಟೆಗೆ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ.

ಸಭೆಗೆ ಹಾಜರಾಗಿ ಸಲಹೆ ಮತ್ತು ಅಭಿಪ್ರಾಯ ನೀಡಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ರಾಷ್ಟ್ರೀಯ ಯುವದಿನಾಚರಣೆ, ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಡಾ. ಅರುಂಧತಿ.ಕೆ

# ದೇಶದ ಭವಿಷ್ಯ ರೂಪಿಸಲು ಕೈಜೋಡಿಸಿ

**■ವಿಜಯಸಾಕ್ಷಿ ಸುದ್ದಿ, ಗದಗ**

ಜಾಗತಿಕವಾಗಿ ಯುವ ಜನರು ಅನೇಕ ದುಶ್ಚಟಗಳಿಗೆ ಬಲಿಯಾಗಿ ತಮ್ಮ ಯೌವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಇಂದಿನ ಯುವಕರು ಸದೃಢ ಆರೋಗ್ಯವನ್ನು ಹೊಂದಿ, ದೇಶದ ಭವಿಷ್ಯ ರೂಪಿಸುವಲ್ಲಿ ಕೈಜೋಡಿಸಬೇಕು. ನಮ್ಮ ದೇಶದ ಜನತೆ ತಮ್ಮ ಜವಾಬ್ದಾರಿಯನ್ನು ಅರಿತು ದೇಶದ ಒಳಿತಿಗೆ ಪೂರಕವಾದ ತೀರ್ಮಾನವನ್ನು ಕೈಗೊಂಡು, ಸದೃಢವಾದ ದೇಶ ಕಟ್ಟುವಲ್ಲಿ ಕೈ ಜೋಡಿಸಬೇಕೆಂದು ಡಾ. ಅರುಂಧತಿ. ಕೆ ಕರೆ ನೀಡಿದರು.

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಘಟಕ, ಆದರ್ಶ ಶಿಕ್ಷಣ ಸಮಿತಿಯ ವಾಣಿಜ್ಯ ಮಹಾವಿದ್ಯಾಲಯ ಇವರುಗಳ ಸಂಯುಕ್ತ ಆಶ್ರಯದಲ್ಲಿ ಆದರ್ಶ ಶಿಕ್ಷಣ ಸಮಿತಿಯ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ 'ರಾಷ್ಟ್ರೀಯ ಯುವ ದಿನಾಚರಣೆ' ಮತ್ತು ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಆರೋಗ್ಯ ಇಲಾಖೆಯ ಬಿ.ಬಿ. ಲಾಳಗಟ್ಟಿ ರಾಷ್ಟ್ರೀಯ ಯುವ ದಿನಾಚರಣೆಯ ಮಹತ್ವವನ್ನು ತಿಳಿಸುತ್ತಾ, ಇಂದಿನ ಯುಗದಲ್ಲಿ ಯುವಕರು ಸನ್ನಡತೆಯನ್ನು ಅಳವಡಿಸಿಕೊಳ್ಳಬೇಕಿದೆ.

▸▸3ನೇ ಪುಟಕ್ಕೆ



ರಾಷ್ಟ್ರೀಯ ಯುವ ದಿನಾಚರಣೆ ನಿಮಿತ್ತ ಹೆಚ್ಐವಿ ಏಡ್ಸ್ ಕುರಿತು ಭಿತ್ತಿಚಿತ್ರ ಸ್ಪರ್ಧೆಯಲ್ಲಿ ವಿಜೇತರಾದ ಕೆ.ಎಸ್.ಎಸ್. ಕಾಲೇಜಿನ ನವೀನಕುಮಾರ ಹಾಗೂ ಎ.ಎಸ್.ಎಸ್. ಕಾಲೇಜಿನ ಗಿರಿಮಲ್ಲಿಕಾ ಮಹಾಂತ ಪ್ರಥಮ, ಕೆ.ಎಸ್.ಎಸ್. ಕಾಲೇಜಿನ ನಿರೂಪದಿ ಹಾಗೂ ಎ.ಎಸ್.ಎಸ್. ಕಾಲೇಜಿನ ಮೇಘಾ ಪಾಟೀಲ ದ್ವಿತೀಯ, ಸ.ಪ್ರ.ದ ಕಾಲೇಜು ಶಿರಹಟ್ಟಿಯ ನವೀನ ಬಡಿಗೇರ ತೃತೀಯ ಸ್ಥಾನ ಪಡೆದಿದ್ದು, ವಿಜೇತರಿಗೆ ನಗದು ಬಹುಮಾನ ಮತ್ತು ಪ್ರಶಸ್ತಿಪತ್ರ ವಿತರಿಸಲಾಯಿತು.

### ಕೆಎಸ್‌ಎಂಸಿಎ ಅಧ್ಯಕ್ಷರಾಗಿ ಸತೀಶ್ ಕೃಷ್ಣ ಸೈಲ್ ಅಧಿಕಾರ ಸ್ವೀಕಾರ

# ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವೆ

**■ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ದೇಶದ ಜಾಹೀರಾತು ಕ್ಷೇತ್ರದಲ್ಲಿ ರಾಜ್ಯ ಸರ್ಕಾರದ ಏಕೈಕ ಸಂಸ್ಥೆಯಾದ ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಸಂಸ್ಥೆಯ 29ನೇ ಅಧ್ಯಕ್ಷರಾಗಿ ಕಾರವಾರ ವಿಧಾನಸಭಾ ಕ್ಷೇತ್ರದ ಶಾಸಕ ಸತೀಶ್ ಕೃಷ್ಣ ಸೈಲ್ ಅಧಿಕಾರ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಶಾಸಕ ಸತೀಶ್ ಸೈಲ್, ಈ ಹೆಮ್ಮೆಯ ಸಂಸ್ಥೆಗೆ ನನ್ನನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದಕ್ಕೆ ಕರ್ನಾಟಕ ಸರ್ಕಾರಕ್ಕೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ. ಕರ್ನಾಟಕ ಸರ್ಕಾರವು ಈ ಸಂಸ್ಥೆಯನ್ನು ಸರ್ವರೀತಿಯಲ್ಲೂ ಪ್ರಗತಿಪರವಾಗಿ ಮುನ್ನಡೆಸಲು ಸರ್ಕಾರವು ವಹಿಸಿರುವ ಈ ಜವಾಬ್ದಾರಿಯನ್ನು ನಾನು ಅತ್ಯಂತ ಸಮರ್ಥವಾಗಿ ನಿರ್ವಹಿಸುತ್ತೇನೆ ಎಂಬ ಭರವಸೆಯಿದೆ ಎಂದರು.

ಸಂಸ್ಥೆಯ ಅಭಿವೃದ್ಧಿಗೆ ಸರ್ಕಾರದಿಂದ ಆಗಬೇಕಾಗಿರುವ ಎಲ್ಲಾ ಸ್ಥರದ ಕಾರ್ಯಗಳನ್ನು ಸಕಾಲದಲ್ಲಿ ಮಾಡಿಸುವುದರೊಂದಿಗೆ ಸರ್ಕಾರದ ಮಟ್ಟದ ಎಲ್ಲಾ ರೀತಿಯ ಬೆಂಬಲವನ್ನು ಪಡೆಯಲು ಪ್ರಮಾಣಿಕವಾಗಿ ಪ್ರಯತ್ನಿಸುವುದು ನನ್ನ ಗುರಿಯಾಗಿದೆ. ಸಂಸ್ಥೆಯ ಅಭಿವೃದ್ಧಿಗೆ ಅಗತ್ಯವಾದ ವಿಚಾರಗಳ ಬಗ್ಗೆ ಸಂಸ್ಥೆಯ ಅಧಿಕಾರಿಗಳು, ಸಿಬ್ಬಂದಿ ಹಾಗೂ ಗ್ರಾಹಕರೊಂದಿಗೆ ಚರ್ಚಿಸಿ ಅವರ ನಿರೀಕ್ಷೆಯಂತೆ ಕಾರ್ಯ ನಿರ್ವಹಿಸಿ, ಸಂಸ್ಥೆಯ ಸರ್ವತೋಮುಖ ಅಭಿವೃದ್ಧಿಯ ಜೊತೆಗೆ ಸಮಾಜಮುಖಿ ಕೆಲಸ ಮಾಡುವುದರಲ್ಲಿಯೂ ತೊಡಗಿಸಿಕೊಳ್ಳುವುದಾಗಿ ತಿಳಿಸಿದರು.

ಪದಗ್ರಹಣ ಸಮಾರಂಭದಲ್ಲಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸಿದ್ದಲಿಂಗಪ್ಪ ಬಿ.ಪೂಜಾರಿ ಹಾಗೂ ಸಿಬ್ಬಂದಿ ವರ್ಗದವರು, ಕಾರವಾರ, ಅಂಕೋಲಾ ವಿಧಾನಸಭಾ ಕ್ಷೇತ್ರದ ಮುಖಂಡರು, ಅಭಿಮಾನಿಗಳು ಸೇರಿದಂತೆ ಕಾರ್ಯಕರ್ತರು ಉಪಸ್ಥಿತರಿದ್ದರು.



## ಸಂಪಾದಕೀಯ

### ಶ್ರೀರಾಮನನ್ನ ರಾಜಕೀಯಕ್ಕೆ ಕರೆತಂದ ರಾಜಕೀಯ ಪಕ್ಷಗಳು

ಇದೇ ಜನವರಿ 22 ರಂದು ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರದ ಪ್ರಾಣ ಪ್ರತಿಷ್ಠಾಪನೆ ಅದ್ದೂರಿಯಾಗಿ ನೆರವೇರಿತು. ದೇಶಾದ್ಯಂತ ರಾಮನಾಮ ಜಪಿಸುವ ಮೂಲಕ ಬಾಲ ರಾಮನನ್ನು ಬರ ಮಾಡಿಕೊಳ್ಳಲಾಯಿತು.

ಲೋಕಸಭೆ ಚುನಾವಣೆಗೂ ಮುನ್ನವೇ ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ಪ್ರಾಣ ಪ್ರತಿಷ್ಠಾಪನೆಯನ್ನು ಟ್ರಸ್ಟ್ ಮೂಲಕ ಬಿಜೆಪಿ ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿ, ರಾಜಕೀಯ ಲಾಭ ಮಾಡಿಕೊಂಡಿತು. ಇದರಿಂದ ವಿಚಲಿತರಾದ ಕಾಂಗ್ರೆಸ್ ನಾಯಕರು, ಇಲ್ಲಸಲ್ಲದ ಹೇಳಿಕೆ ನೀಡಿ ಹಿಂದೂ ವಿರೋಧಿ ಪಟ್ಟ ಕಟ್ಟಿಕೊಳ್ಳಬೇಕಾಯಿತು.

ಅಯೋಧ್ಯೆ ರಾಮಮಂದಿರ ಪ್ರಾಣ ಪ್ರತಿಷ್ಠಾಪನೆ ವೇಳೆ ಆದ ಡ್ಯಾಮೇಜ್ ಕಂಟ್ರೋಲ್ ಮಾತ್ರವಲ್ಲದೇ ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಹಿಂದೂಗಳ ಮತ ಸೆಳೆಯುವ ತಂತ್ರಗಾರಿಕೆಯನ್ನು ಕಾಂಗ್ರೆಸ್ ಅನುಸರಿಸುತ್ತಿದೆ.

ಸಾರಿಗೆ ಹಾಗೂ ಮುಜರಾಯಿ ಇಲಾಖೆ ಸಚಿವ ರಾಮಲಿಂಗಾ ರೆಡ್ಡಿ ಈ ಬಗ್ಗೆ ಅಧಿಕೃತ ಮಾಹಿತಿಯೊಂದನ್ನು ನೀಡಿದ್ದು, ರಾಜ್ಯದ 100 ಶ್ರೀರಾಮ ಮಂದಿರ ಜೀರ್ಣೋದ್ಧಾರಕ್ಕಾಗಿ 100 ಕೋಟಿ ರೂಪಾಯಿ ಮೀಸಲಿಡುವ ಭರವಸೆ ನೀಡಿದ್ದಾರೆ. ಕಾಂಗ್ರೆಸ್ ಸಹ ಹಿಂದೂಗಳ ಪರವಾಗಿರುವ ಪಕ್ಷ ಎಂದು ಬಿಂಬಿಸಿಕೊಳ್ಳಲು ಹೊರಟಿದ್ದಾರೆ.

ಆ ಮೂಲಕ ಕಾಂಗ್ರೆಸ್ ಸಹ ಬಿಜೆಪಿ ರೀತಿ ಶ್ರೀರಾಮನನ್ನ ರಾಜಕೀಯಕ್ಕೆ ಬಳಸಿಕೊಳ್ಳುವ ಪ್ರಯತ್ನ ಮಾಡುತ್ತಿದೆ. ಪ್ರಭು ಶ್ರೀ ರಾಮ ಕೇವಲ ಆರಾಧ್ಯ ದೈವ ಮಾತ್ರವಲ್ಲದೆ, ಮತ ದೊರಕಿಸಿಕೊಡುವ ಶಕ್ತಿಯಾಗಿ ಬದಲಾಗಿದ್ದಾನೆ. ಹೀಗಾಗಿ ಭವಿಷ್ಯದಲ್ಲಿ ಮತ ಗಳಿಕೆಗಾಗಿ ಶ್ರೀರಾಮನ ಮೊರೆ ಹೋಗಬೇಕಾದ ಅನಿವಾರ್ಯತೆ ಎದುರಾಗಿದೆ.

2024ರ ಲೋಕಸಭೆ ಚುನಾವಣೆಯಲ್ಲಿ ಶ್ರೀರಾಮ ಮತ ಸೆಳೆಯುವ ಮಹಾದೇವ ಆಗಲಿದ್ದಾನೆ. ಹೀಗಾಗಿ ಕರ್ನಾಟಕದಲ್ಲಿಯೂ ಶ್ರೀರಾಮನಾಮ ಜಪ ಆರಂಭವಾಗಿದೆ. ಬರುವ ರಾಜ್ಯ ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಮನಾಮ ಜಪಿಸಿ ಮತ ಸೆಳೆಯುವ ಪ್ರಯತ್ನ ಮಾಡಲಿರುವುದು ಸ್ಪಷ್ಟವಾಗಿದೆ. ಆದರೆ ಶ್ರೀರಾಮ ಎಷ್ಟರ ಮಟ್ಟಿಗೆ ಕಾಂಗ್ರೆಸ್ ಕೈ ಹಿಡಿಯಲಿದ್ದಾನೆ ಎನ್ನುವುದು ಚುನಾವಣೆ ಫಲಿತಾಂಶದ ನಂತರ ಸ್ಪಷ್ಟವಾಗಲಿದೆ.

---

ಉಚಿತ ಆರೋಗ್ಯ ಶಿಬಿರದಲ್ಲಿ ಶಾಸಕ ಡಾ.ಚಂದ್ರು ಲಮಾಣಿ ಅಭಿಮತ

# ವೈದ್ಯರನ್ನು ಸಮಾಜ ಗೌರವದಿಂದ ಕಾಣಬೇಕು

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ವೈದ್ಯಕೀಯ ವೃತ್ತಿ ಅತ್ಯಂತ ಶ್ರೇಷ್ಠ ಮತ್ತು ಗೌರವಯುತವಾಗಿದೆ. ವೈದ್ಯರು ಮಾನವೀಯ ನೆಲೆಗಟ್ಟಿನಲ್ಲಿ ಪ್ರಾಮಾಣಿಕ ಸೇವೆ ಸಲ್ಲಿಸಿದರೆ ಕೀರ್ತಿ, ಯಶಸ್ಸು ಸಂಪತ್ತು ತಾನಾಗಿಯೇ ಬರುತ್ತದೆ. ಇದಕ್ಕೆ ಸ್ವತಃ ನಾನೇ ಸಾಕ್ಷಿ ಎಂದು ಶಾಸಕ ಡಾ.ಚಂದ್ರು ಲಮಾಣಿ ಹೇಳಿದರು.

ಅವರು ಪಟ್ಟಣದ ಶ್ರೀ ವೀರಗಂಗಾಧರ ಸಮುದಾಯ ಭವನದಲ್ಲಿ ಲಕ್ಷ್ಮೇಶ್ವರ ತಾಲೂಕು ವೈದ್ಯರ ಸಂಘದ ಉದ್ಘಾಟನೆ, ಪದಾಧಿಕಾರಿಗಳ ಪದಗ್ರಹಣ ಮತ್ತು ವೈದ್ಯರ ಸಂಘ, ಹುಬ್ಬಳ್ಳಿಯ ಡಾ. ಮಹೇಶ ನಾಲ್ವಾಡ ಪ್ರತಿಷ್ಠಾನ, ಸುಚಿರಾಯು ಆಸ್ಪತ್ರೆ, ರಾಜ್ಯ ನಿವೃತ್ತ ಸರ್ಕಾರಿ ನೌಕರರ ಸಂಘ ಹಾಗೂ ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಉಚಿತ ಆರೋಗ್ಯ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಹೊಸ ಆವಿಷ್ಕಾರಗಳೊಂದಿಗೆ ವೈದ್ಯಕೀಯ ಕ್ಷೇತ್ರ ವೇಗದಲ್ಲಿ ಬೆಳೆಯುತ್ತಿದೆ. ವೈದ್ಯರು ಸದಾ ಹೊಸತನ್ನು ಕಲಿಯುವ ಮತ್ತು ಹೊಸ ಅವಿಷ್ಕಾರಗಳ ಜ್ಞಾನ ಹೊಂದಿ ರೋಗ ಗುಣಪಡಿಸುವ ಜ್ಞಾನ ಹೊಂದುವುದು ಮುಖ್ಯವಾಗಿದೆ. ನಮ್ಮ ಸಮಾಜ ವೈದ್ಯೋ ನಾರಾಯಣೋ ಹರಿಃ ಎನ್ನುತ್ತದೆ. ಈ ನಿಟ್ಟಿನಲ್ಲಿ ಸಮಾಜವೂ ವೈದ್ಯರನ್ನು ಗೌರವದಿಂದ ಕಾಣಬೇಕು. ಕ್ಷೇತ್ರ ವ್ಯಾಪ್ತಿಯಲ್ಲಿ ವೈದ್ಯರ ಕೊರತೆ ನೀಗಿಸುವುದು ಮತ್ತು ಆಸ್ಪತ್ರೆಗಳಿಗೆ ಅಗತ್ಯ ಸೌಲಭ್ಯ ಕಲ್ಪಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ಹುಬ್ಬಳ್ಳಿಯ ಡಾ. ಮಹೇಶ ನಾಲ್ವಾಡ ಮಾತನಾಡಿ, ನಾಲ್ವಾಡ ಪ್ರತಿಷ್ಠಾನದಿಂದ ಇದುವರೆಗೂ 6531 ಉಚಿತ ಆರೋಗ್ಯ ಶಿಬಿರ, 1118 ರಕ್ತದಾನ ಶಿಬಿರದ ಜತೆಗೆ ಗ್ರಾಮೀಣ ಜನರಲ್ಲಿ ಆರೋಗ್ಯದ ಬಗ್ಗೆ ಜಾಗೃತಿ, ಆರೋಗ್ಯ ಸೇವೆಯನ್ನು ಮಾಡಲಾಗುತ್ತಿದೆ. ಪ್ರಸ್ತುತ ವೈದ್ಯಕೀಯ ವೃತ್ತಿಗೆ ಸಾಕಷ್ಟು ಮಹತ್ವವಿದೆ. ಸಮಾಜ ನಮ್ಮ ಮೇಲಿಟ್ಟಿರುವ ನಂಬಿಕೆ-ವಿಶ್ವಾಸಕ್ಕೆ ಧಕ್ಕೆಯಾಗದಂತೆ ನಿಷ್ಠೆಯಿಂದ ಸೇವೆ ಮಾಡಬೇಕು ಎಂದರು.



> ಸಮಾಜ ನಮಗೇನು ಮಾಡಿದೆ ಎನ್ನುವದನ್ನು ಬಿಟ್ಟು ಸಮಾಜ ಸೇವೆಯ ಮನೋಭಾವ ಹೊಂದಿದಾಗ ಬದುಕು ಸಾರ್ಥಕವಾಗುತ್ತದೆ. ನಿತ್ಯದ ಒತ್ತಡದ ಬದುಕಿನಲ್ಲಿಯೂ ಸಾಂಪ್ರದಾಯಿಕ ಆಹಾರ ಪದ್ಧತಿ, ವ್ಯಾಯಾಮ, ಸಕಾಲಿಕ ನಿದ್ದೆ, ಫಾಸ್ಟ್‌ಫುಡ್ ಮತ್ತು ದುಶ್ಚಟಗಳಿಂದ ದೂರವಿರಬೇಕು ಮತ್ತು ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ತೋರದಿದ್ದರೆ ಆರೋಗ್ಯ ಭಾಗ್ಯ ನಮ್ಮದಾಗುತ್ತದೆ. ವೈದ್ಯಕೀಯ ಕ್ಷೇತ್ರಕ್ಕೆ ಸರ್ಕಾರ ಕೊಟ್ಟಿರುವ ಆರೋಗ್ಯ ಸೇವೆಯ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು.
>
> **– ಡಾ. ಮಹೇಶ ನಾಲ್ವಾಡ.**
> ಡಾ. ಮಹೇಶ ನಾಲ್ವಾಡ ಪ್ರತಿಷ್ಠಾನ, ಹುಬ್ಬಳ್ಳಿ.

ಮಾಜಿ ಶಾಸಕರಾದ ಜಿ.ಎಂ. ಮಹಾಂತಶೆಟ್ಟರ, ಜಿ.ಎಸ್. ಗಡ್ಡದೇವರಮಠ ಮಾತನಾಡಿದರು. ತಾಲೂಕಾ ವೈದ್ಯರ ಸಂಘದ ಅಧ್ಯಕ್ಷ ಡಾ. ಪಿ.ಡಿ. ತೋಟದ ಅಧ್ಯಕ್ಷತೆ ವಹಿಸಿದ್ದರು. ಡಾ. ಎಸ್.ಸಿ. ಮಲ್ಲಾಡದ, ಡಾ. ದೀಪಾ ಬಿ.ವಿ, ವಿಜಯಕುಮಾರ ಮಹಾಂತಶೆಟ್ಟರ, ಚಂಬಣ್ಣ ಬಾಳಿಕಾಯಿ, ಡಾ. ಪ್ರಸನ್ ಕುಲಕರ್ಣಿ, ಡಾ. ಆನಂದ ಪಾಟೀಲ, ಡಾ. ಅಮರೇಶ ಅಮರಶೆಟ್ಟಿ, ಡಾ. ಎಸ್.ಜಿ. ಹೂವಿನ, ಡಾ. ಎಂ. ಗೋಣೆಪ್ಪನವರ, ಸಿ.ಆರ್. ಲಕ್ಕುಂಡಿಮಠ, ಎಲ್.ವಿ. ಹೇಮಗಿರಿಮಠ, ಬಿ.ಎಫ್. ಉಪ್ಪಾರ ಹಾಗೂ ತಾಲೂಕು ವೈದ್ಯರ ಸಂಘದ ಸದಸ್ಯರು ಉಪಸ್ಥಿತರಿದ್ದರು.

ಶಿಬಿರದಲ್ಲಿ ಡಾ. ಮಹೇಶ ನಾಲವಾಡ, ಡಾ. ಶರಣ ಹಳ್ಳದ, ಡಾ. ಜೂಲಿಯಟ್, ಡಾ. ವಿನಯ ಸಜ್ಜನ, ಡಾ. ಖುನಾಲ್ ಬಡಬಡೆ, ಡಾ. ಪ್ರವೀಣ ಸಜ್ಜನ, ಡಾ. ಬಿ.ಎಂ. ಹಿಪ್ಪರಗಿ ಸೇರಿದಂತೆ 20ಕ್ಕೂ ಹೆಚ್ಚು ತಜ್ಞ ವೈದ್ಯರು ಉಚಿತ ಸೇವೆ ನೀಡಿದರು. 550ಕ್ಕೂ ಹೆಚ್ಚು ರೋಗಿಗಳು ಉಚಿತ ಶಿಬಿರದ ಸದುಪಯೋಗ ಪಡೆದುಕೊಂಡರು. ವೈದ್ಯರ ಸಂಘದ ಕಾರ್ಯದರ್ಶಿ ಡಾ. ವಿನೋದ ಹೊನ್ನಿಕೊಪ್ಪ, ಡಾ. ಸಿ.ಎಸ್. ಕೋಟಿಮಠ, ಡಾ. ಶರಣಪ್ಪ ಬಿಂಕದಕಟ್ಟಿ, ನಾಗರಾಜ ವಾಲಿ ನಿರೂಪಿಸಿದರು.

---

# ಮೆಣಸಿನಕಾಯಿ ಬೆಲೆ ಕುಸಿತ; ರೈತರಿಗೆ ಆತಂಕ



**■ವಿಜಯಸಾಕ್ಷಿ ಸುದ್ದಿ, ಗದಗ**

ಜಿಲ್ಲೆಯಲ್ಲಿ ಮುಂಗಾರು ಹಾಗೂ ಹಿಂಗಾರು ಹಂಗಾಮಿನಲ್ಲಿ ಮಳೆ ಕೊರತೆಯಿಂದಾಗಿ ಬರಗಾಲ ಆವರಿಸಿದ್ದು, ಮೆಣಸಿನಕಾಯಿ ಬೆಳೆಗಾರರು ಕಂಗಾಲಾಗಿದ್ದಾರೆ. ಪ್ರಸ್ತುತ ಅಳಿದುಳಿದಿರುವ ಮೆಣಸಿನಕಾಯನ್ನು ಬ್ಯಾಡಗಿ, ಹುಬ್ಬಳ್ಳಿ, ಗದಗ ಮಾರುಕಟ್ಟೆಗೆ ಒಯ್ದರೆ, ಕ್ವಿಂಟಾಲ್‌ಗೆ 20ರಿಂದ 35 ಸಾವಿರ ರೂ.ಗಳಿಗೆ ಆವಕವಾಗುತ್ತಿದೆ. ಕಳೆದ ವರ್ಷ ಕ್ವಿಂಟಾಲ್ ಒಂದಕ್ಕೆ ಗರಿಷ್ಠ 75 ಸಾವಿರ ರೂ.ಗಳಿಗೆ ಮಾರಾಟವಾಗಿತ್ತು.

ಕರ್ನಾಟಕ ರಾಜ್ಯದ ಗದಗ ಜಿಲ್ಲೆಯಲ್ಲಿ ಅತ್ಯಂತ ಮಹತ್ವ ಹೊಂದಿರುವ ಮೆಣಸಿನಕಾಯಿ ಬೆಳೆಗೆ ಈ ವರ್ಷದ ಬರಗಾಲ ತೀವ್ರ ನಷ್ಟ ತಂದೊಡ್ಡಿದ್ದು, ಸಾಲ-ಸೋಲ ಮಾಡಿ ಬಿತ್ತನೆ ಮಾಡಿದ ರೈತ ನಷ್ಟ ಅನುಭವಿಸುವಂತಾಗಿದೆ.

ಕಳೆದ ವರ್ಷ ಹೆಚ್ಚಿನ ಮಳೆಯಾಗಿ ಬೆಳೆ ಹಾನಿಗೊಳಗಾಗಿತ್ತು. ಈ ವರ್ಷ ಮಳೆ ಕೈಕೊಟ್ಟು ಬರಗಾಲ ಆವರಿಸಿ ರೈತರು ಸಾಕಷ್ಟು ನಷ್ಟ ಅನುಭವಿಸುವಂತಾಗಿದೆ. ಬೆಳೆ ಹಾನಿ ಪರಿಹಾರ ಹಾಗೂ ಬೆಳೆ ವಿಮೆ ಹಣವನ್ನು ಮಧ್ಯಂತರ ಪರಿಹಾರವಾಗಿ ಜಮಾವಣೆ ಮಾಡಿ ಸರ್ಕಾರ ಕೈತೊಳೆದುಕೊಂಡಿದೆ ಎನ್ನುತ್ತಾರೆ ರೈತರು. ಪೂರ್ಣ ಪ್ರಮಾಣದ ಪರಿಹಾರವನ್ನು ರೈತರ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕೆಂದು ರೈತ ಸಂಘದ ಗದಗ ಜಿಲ್ಲಾಧ್ಯಕ್ಷ ಯಲ್ಲಪ್ಪ ಎಚ್.ಬಾಬರಿ ಆಗ್ರಹಿಸಿದ್ದಾರೆ.

---

ಕಡೇನಂದಿಹಳ್ಳಿ ಶ್ರೀ ಗುರು ರೇವಣಸಿದ್ಧೇಶ್ವರ ಪುಣ್ಯಾಶ್ರಮದಲ್ಲಿ ಧರ್ಮ ಸಮಾರಂಭ

# ಜೀವನದಲ್ಲಿ ಶ್ರದ್ಧೆ-ನಂಬಿಕೆಗಳಿರಲಿ

**■ವಿಜಯಸಾಕ್ಷಿ ಸುದ್ದಿ, ಶಿಕಾರಿಪುರ**

ಪ್ರತಿಯೊಂದರ ಸತ್ಯಾಸತ್ಯತೆ ನಾವು ನೋಡುವ ದೃಷ್ಟಿಯಲ್ಲಿ ಅಡಗಿದೆ. ಜೀವನದಲ್ಲಿ ಶ್ರದ್ಧೆ, ನಂಬಿಕೆ, ವಿಶ್ವಾಸಗಳನ್ನು ಬೆಳೆಸಿಕೊಂಡು ನಡೆಯುವುದು ಅವಶ್ಯಕವಾಗಿದೆ ಎಂದು ಶ್ರೀ ಉಜ್ಜಯಿನಿ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಭಗವತ್ಪಾದರು ನುಡಿದರು.

ಅವರು ಕಡೇನಂದಿಹಳ್ಳಿ ಶ್ರೀ ಗುರು ರೇವಣಸಿದ್ಧೇಶ್ವರ ಪುಣ್ಯಾಶ್ರಮದಲ್ಲಿ ಜರುಗಿದ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಶ್ರೀ ಜಗದ್ಗುರು ರೇಣುಕಾಚಾರ್ಯರ ಎಲ್ಲ ಅವತಾರಗಳು ಎಲ್ಲ ಸಾಕ್ಷಾತ್ಕಾರಗಳು ಸತ್ಯವಾಗಿವೆ ಎಂಬುದನ್ನು ಈ ವೇದಿಕೆಯ ಮೂಲಕ ಸ್ಪಷ್ಟಪಡಿಸುತ್ತೇವೆ. ಇಲ್ಲಿ ನಿರ್ಮಾಣಗೊಂಡಿರುವ 36 ಅಡಿ ಎತ್ತರದ ಶ್ರೀ ಜಗದ್ಗುರು ರೇಣುಕಾಚಾರ್ಯರ ಮೂರ್ತಿ ನೋಡಿದಾಗ ಸಾಕ್ಷಾತ್ತ ರೇಣುಕರು ಇಲ್ಲಿದ್ದಾರೆ ಎಂಬ ಭಾವ ಮೂಡುತ್ತದೆ. ಜನರ ಮನದಲ್ಲಿ ಆಧ್ಯಾತ್ಮದ ಬೀಜ ಬಿತ್ತಬೇಕು. ಪಂಚಪೀಠಗಳ ಆಶೀರ್ವಾದದಿಂದ ಈ ಕ್ಷೇತ್ರ ಆಧ್ಯಾತ್ಮಿಕ ಕೇಂದ್ರವಾಗಿ, ನೆಮ್ಮದಿ ನೀಡುವ ತಾಣವಾಗಿ ಜನರ ಕಷ್ಟ ಕಾರ್ಪಣ್ಯ ದೂರ ಮಾಡುವ ಸ್ಥಳವಾಗಿ ಬೆಳೆಯುತ್ತಿದೆ. ಇದರ ಹಿಂದೆ ರೇವಣಸಿದ್ಧೇಶ್ವರ ಶಿವಾಚಾರ್ಯರ ತಪಸ್ಸಿನ ಶಕ್ತಿ ಇದೆ. ನಿಷ್ಕಾಮ ಸಂಕಲ್ಪದಿಂದ ಕ್ಷೇತ್ರವನ್ನು ಬೆಳೆಸಿದ್ದಾರೆ. ಈ ಕ್ಷೇತ್ರ ಇನ್ನೂ ಉತ್ತರೋತ್ತರ ಅಭಿವೃದ್ಧಿ ಹೊಂದಲಿ ಎಂದರು.



> ಶ್ರೀ ಜಗದ್ಗುರು ರೇಣುಕಾಚಾರ್ಯರು ವಿಭೀಷಣನ ಕೋರಿಕೆಯ ಮೇರೆಗೆ ಶ್ರೀಲಂಕಾದಲ್ಲಿ ಮುಕ್ಕೋಟಿ ಶಿವಲಿಂಗಗಳನ್ನು ಸ್ಥಾಪಿಸಿದ್ದು ಇತಿಹಾಸವಾದರೂ ಅದು ಇಂದಿಗೂ ಸತ್ಯವಾಗಿದೆ. ಶ್ರೀಲಂಕಾದ ಜಾಫ್ನಾದಿಂದ ಉತ್ತರಕ್ಕೆ 140 ಕಿ.ಮೀ.ಅಂತರದಲ್ಲಿರುವ ಲಿಂಗಮಲ್ಲೈ ಹತ್ತಿರ ರೇಣುಕವನ-ರೇಣುಕ ಗ್ರಾಮವಿದ್ದು, ಅಲ್ಲಿಗೆ ಭೇಟಿ ನೀಡಿದರೆ ಆ ಸಂಪೂರ್ಣ ಪ್ರದೇಶ ಲಿಂಗಮಯವಾಗಿರುವುದನ್ನು ಕಾಣಬಹುದಾಗಿದೆ. ರೇಣುಕರ ಹೆಸರನ್ನು ಹೊಂದಿದ ಅನೇಕ ಜನರು ಅಲ್ಲಿದ್ದಾರೆ. ಹೊರದೇಶದವರು ಒಪ್ಪುವ ಈ ಪರಂಪರೆಯನ್ನು ನಮ್ಮವರು ಪ್ರಶ್ನೆ ಮಾಡುವುದು ಸರಿಯಲ್ಲ.
>
> **– ಶ್ರೀ ಉಜ್ಜಯಿನಿ ಜಗದ್ಗುರುಗಳು.**

ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು ನೇತೃತ್ವ ವಹಿಸಿ ಮಾತನಾಡಿದರು. ಮಣಕೂರು ಮಲ್ಲಿಕಾರ್ಜುನ ಶಿವಾಚಾರ್ಯರು, ಜಡೆಯ ಡಾ. ಮಹಾಂತ ಸ್ವಾಮಿಗಳು, ಕಾರ್ಜುವಳ್ಳಿ ಸದಾಶಿವ ಶಿವಾಚಾರ್ಯರು, ಹಾರನಹಳ್ಳಿ ಶಿವಯೋಗಿ ಶಿವಾಚಾರ್ಯರು, ಕಡೇನಂದಿಹಳ್ಳಿ ವೀರಭದ್ರ ಶಿವಾಚಾರ್ಯರು, ಉಪಸ್ಥಿತರಿದ್ದರು. ಕ.ಮಾರಾಟ ಮಹಾಮಂಡಳದ ನಿರ್ದೇಶಕ ಅಗಡಿ ಅಶೋಕ ಸೇರಿದಂತೆ ಗಣ್ಯರು ವೇದಿಕೆಯ ಮೇಲೆ ಇದ್ದರು. ತಡಸನಹಳ್ಳಿ ಶ್ರೀ ಮಲ್ಲಿಕಾರ್ಜುನ ವಿದ್ಯಾವರ್ಧಕ ಸಂಸ್ಥೆ ಹಾಗೂ ಶಾಂತಿನಿಕೇತನ ಶಾಲಾ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಇದಕ್ಕೂ ಮುನ್ನ ರೋಣದ ರೇಣುಕಯ್ಯ ಶಾಸ್ತ್ರಿಗಳಿಂದ ಶ್ರೀ ಜಗದ್ಗುರು ರೇಣುಕ ಭಗವತ್ಪಾದರ ಪುರಾಣ ಪ್ರವಚನ ಜರುಗಿತು.

---

ಶ್ರೀ ಗುರು ರುದ್ರಮುನೀಶ್ವರ ಸಮುದಾಯ ಭವನದಲ್ಲಿ ಇಷ್ಟಲಿಂಗ ಮಹಾಪೂಜೆ

# ಆಧ್ಯಾತ್ಮ ಸಾಧನೆಯಿಂದ ನೆಮ್ಮದಿ

**■ವಿಜಯಸಾಕ್ಷಿ ಸುದ್ದಿ, ಬಂಕಾಪುರ**

ಆಧುನಿಕ ಜಗದಲ್ಲಿ ಮನುಷ್ಯ ಬಹಳಷ್ಟು ಒತ್ತಡದಲ್ಲಿ ಸಿಲುಕಿದ್ದಾನೆ. ಮಾನಸಿಕವಾಗಿ ಮನಸ್ಸು ದುರ್ಬಲಗೊಳ್ಳುತ್ತದೆ. ಶಾಂತಿ-ನೆಮ್ಮದಿಗಾಗಿ ಜೀವನದಲ್ಲಿ ಒಂದಿಷ್ಟಾದರೂ ಆಧ್ಯಾತ್ಮ ಚಿಂತನೆ ಮಾಡುವ ಅವಶ್ಯಕತೆ ಇದೆಯೆಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಟ್ಟರು.

ಅವರು ಬಂಕಾಪುರ ಅರಳೆಲೆ ಹಿರೇಮಠದ ಆವರಣದಲ್ಲಿ ನಿರ್ಮಿಸಿದ ಶ್ರೀ ಗುರು ರುದ್ರಮುನೀಶ್ವರ ಸಮುದಾಯ ಭವನದಲ್ಲಿ ಇಷ್ಟಲಿಂಗ ಮಹಾಪೂಜೆ ನೆರವೇರಿಸಿ ನಂತರ ನಡೆದ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಜೀವನದಲ್ಲಿ ಹಣ ಸಂಪಾದನೆಯೊಂದೇ ಗುರಿಯಲ್ಲ. ಹಣದ ಜೊತೆಗೆ ಒಂದಿಷ್ಟಾದರೂ ಆಧ್ಯಾತ್ಮ ಚಿಂತನೆಯನ್ನು ಬೆಳೆಸಿಕೊಳ್ಳಬೇಕು. ಆಡುವ ಮಾತು, ನಡೆಯುವ ದಾರಿ ಬೇರೆ ಬೇರೆ ಆದ ಕಾರಣ ಜೀವನದಲ್ಲಿ ಇರಬೇಕಾದಷ್ಟು ಶಾಂತಿಯಿಲ್ಲ. ಸತ್ಯ ಮತ್ತು ಧರ್ಮದ ವಾತಾವರಣದಲ್ಲಿ ಬೆಳೆದು ಬಲಗೊಳ್ಳಬೇಕಾದರೆ ಗುರುವೇ ಮೂಲನಾಗಿದ್ದಾನೆ. ಜೀವನ ವಿಕಾಸ ಮತ್ತು ಅಭ್ಯುದಯ ಧರ್ಮದ ಆಚರಣೆಯಿಂದ ದೊರಕುತ್ತದೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಮೌಲ್ಯಾಧಾರಿತ ಬದುಕಿಗೆ ಧರ್ಮದ ದಶವಿಧ ಸೂತ್ರಗಳನ್ನು ಬೋಧಿಸಿ ಉದ್ಧರಿಸಿದ್ದಾರೆ. ಅಷ್ಟಾವರಣ, ಪಂಚಾಚಾರ ಮತ್ತು ಷಟ್‌ಸ್ಥಲ ಚಿಂತನಗಳಿಂದ ಬದುಕು ಬಲಗೊಳ್ಳಲು ಸಾಧ್ಯವಾಗುತ್ತದೆ. ಶಿವನನ್ನು ಪೂಜಿಸಿದರೆ ಸಕಲ ದೇವಾನುದೇವತೆಗಳನ್ನು ಪೂಜಿಸಿದಫಲ ಪ್ರಾಪ್ತವಾಗುತ್ತದೆ ಎಂದರು.

ನೇತೃತ್ವ ವಹಿಸಿದ್ದ ಪಟ್ಟಾಧ್ಯಕ್ಷರಾದ ರೇವಣಸಿದ್ಧೇಶ್ವರ ಶಿವಾಚಾರ್ಯರು ಮಾತನಾಡಿ, ಲಿಂಗೈಕ್ಯ ಶ್ರೀ ಗುರು ರುದ್ರಮುನಿ ಶಿವಾಚಾರ್ಯರು ಭಕ್ತರ ಒಳಿತಿಗಾಗಿ ಬಹಳಷ್ಟು ಶ್ರಮಿಸಿದ್ದನ್ನು ಮರೆಯಲಾಗದೆಂದರು. ಪೂಜಾ ಪರ್ವ ಕಾಲದಲ್ಲಿ ಮುಕ್ತಿಮಂದಿರ ಕ್ಷೇತ್ರದ ವಿಮಲ ರೇಣುಕ ಮುಕ್ತಿಮುನಿ ಶಿವಾಚಾರ್ಯರು ಮಾತನಾಡಿ, ಭೌತಿಕ ಬದುಕು ಶ್ರೀಮಂತಗೊಂಡಂತೆ ಆಂತರಿಕ ಬದುಕು ಪರಿಶುದ್ಧಗೊಳ್ಳಬೇಕಾಗಿದೆ. ಅರಿವಿನ ದಾರಿಯಲ್ಲಿ ನಡೆಸುವುದೇ ನಿಜವಾದ ಗುರುವಿನ ಕರ್ತವ್ಯ ಎಂದರು.

ಸಂಗೊಳ್ಳಿ, ಶಾಂತಪುರ, ಕೂಡಲ, ಹಾವೇರಿ, ಗಂಜಿಗಟ್ಟಿ, ಹಿರೇಮಣಕಟ್ಟಿ ಶ್ರೀಗಳು ಉಪಸ್ಥಿತರಿದ್ದರು. ಬಂಕಾಪುರ ಪಟ್ಟಣದ ಮಹಿಳಾ ಬಳಗದವರು ಅಗ್ರೋದಕ ಹೊತ್ತು ತಂದು ಇಷ್ಟಲಿಂಗ ಪೂಜೆಯಲ್ಲಿ ಪಾಲ್ಗೊಂಡಿದ್ದು ಮತ್ತೊಂದು ವಿಶೇಷವಾಗಿತ್ತು. ಡಾ. ಆರ್.ಎಸ್. ಅರಳೆಲೆಮಠ, ಶಿಗ್ಗಾಂವಿ ಡಾ. ಡಿ.ಎ. ಗೊಬ್ಬರಗುಂಪಿ, ಪ್ರೊ. ಸಿ.ಎಚ್. ತಾವರಗೊಂದಿ, ಡಾ. ಗುರುಪಾದಯ್ಯ ಸಾಲಿಮಠ ಉಪಸ್ಥಿತರಿದ್ದು ಗುರುರಕ್ಷೆ ಪಡೆದರು. ಮಳಲಿಮಠದ ಡಾ. ನಾಗಭೂಷಣ ಶಿವಾಚಾರ್ಯ ಸ್ವಾಮಿಗಳು ನಿರೂಪಿಸಿದರು.



> ಕೇಂದ್ರ ಸರ್ಕಾರದ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ ಜೋಷಿ ಮಾತನಾಡಿ ಆಧ್ಯಾತ್ಮದ ತವರು ಮನೆಯಂತಿರುವ ಭಾರತ ದೇಶದಲ್ಲಿ ಸಂಸ್ಕಾರ ಮತ್ತು ಸಂಸ್ಕೃತಿ ಅನುಚಾನವಾಗಿ ಬೆಳೆದು ಬಂದಿದೆ. ಈ ಪುಣ್ಯದ ನಾಡಿನ ಆಚಾರ್ಯರು, ಋಷಿ ಮುನಿಗಳು ಧರ್ಮದ ಮೂಲಕ ಮನುಷ್ಯನ ಬದುಕಿಗೆ ಭಾವೈಕ್ಯತೆಯ ಬೆಸುಗೆಯನ್ನು ಬೆಸೆದಿದ್ದಾರೆ. ಇಡೀ ವಿಶ್ವವೇ ಇಂದು ಭಾರತದತ್ತ ಮುಖ ಮಾಡಿ ನೋಡಲು ಇಲ್ಲಿನ ಧರ್ಮ ಸಂಸ್ಕೃತಿಯೇ ಕಾರಣ ಎಂಬುದನ್ನ ಮರೆಯಬಾರದು. ನಾಡಿನ ಪೀಠ-ಮಠಗಳು ಜನಮಾನಸಕ್ಕೆ ಅವಶ್ಯಕವಾದ ಆಧ್ಯಾತ್ಮದ ಬೆಳಗನ್ನಿತ್ತು ಮುನ್ನಡೆಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ ಎಂದರು.

---

# ರೋಟರಿಯಿಂದ ಎನ್‌ಎಸ್‌ಎಸ್ ಶಿಬಿರದಲ್ಲಿ ಕಣ್ಣಿನ ತಪಾಸಣೆ




**■ವಿಜಯಸಾಕ್ಷಿ ಸುದ್ದಿ, ಗದಗ**

ಇಲ್ಲಿನ ನಾಗಾವಿ ಗ್ರಾಮದಲ್ಲಿ ಕೆಎಲ್‌ಇ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಆಯೋಜಿಸಿದ್ದ ಎನ್‌ಎಸ್‌ಎಸ್ ವಿಶೇಷ ಶಿಬಿರದ ಕಾರ್ಯಕ್ರಮದಲ್ಲಿ ರೋಟರಿ ಕ್ಲಬ್ ಗದಗ-ಬೆಟಗೇರಿತಿಯಿಂದ ಕಣ್ಣಿನ ತಪಾಸಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ರೋಟರಿ ವೆಲ್‌ಫೇರ್ ಸೊಸೈಟಿಯ ಅಧ್ಯಕ್ಷ ರೊ. ಶ್ರೀಧರ ಸುಲ್ತಾನಪೂರ ಕಾರ್ಯಮ್ರಕ ಉದ್ಘಾಟಿಸಿ ಮಾತನಾಡಿ, ಸಂಸ್ಥೆಯು ದಾನಿಗಳ ಸಹಾಯದಿಂದ ಕಳೆದ 22 ವರ್ಷಗಳಿಂದ ಉಚಿತ ಕಣ್ಣಿನ ಆಸ್ಪತ್ರೆಯನ್ನು ನಡೆಸುತ್ತಿದ್ದು, ಇಂದು ಎನ್‌ಎಸ್‌ಎಸ್ ಕಾರ್ಯಕ್ರಮದಲ್ಲಿ ಆರೋಗ್ಯ ತಪಾಸಣಾ ಶಿಬಿರ ನಡೆಸಲು ಅವಕಾಶ ನೀಡಿದ ಸಂಘಟಕರಿಗೆ ಕೃತಜ್ಞತೆ ತಿಳಿಸಿದರು.

ನೇತ್ರ ತಜ್ಞ ಡಾ. ವೀರಯ್ಯ ಹಿರೇಮಠ 30ಕ್ಕೂ ಹೆಚ್ಚು ರೋಗಿಗಳ ತಪಾಸಣೆ ನಡೆಸಿ ಉಚಿತ ಔಷಧವನ್ನು ನೀಡಿದರು. ರೊ.ಡಾ. ಕಮಲಾಕ್ಷಿ ಅಂಗಡಿಯವರು ಸಾಮಾನ್ಯ ರೋಗಗಳ ತಪಾಸಣೆ ನಡೆಸಿ ಯೋಗ್ಯ ಸಲಹೆ ಹಾಗೂ ಔಷಧಿಯನ್ನು ನೀಡಿದರು.

ಶಿಬಿರದ ಪ್ರಾರಂಭಕ್ಕೂ ಮುನ್ನ ಕೆಎಲ್‌ಇ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ 50ಕ್ಕೂ ಹೆಚ್ಚು ವಿದ್ಯಾರ್ಥಿಗಳು ಗ್ರಾಮದ ಎಲ್ಲ ಮನೆಗಳಿಗೆ ತೆರಳಿ ಶಿಬಿರದ ಮಾಹಿತಿ ನೀಡಿ, ಸದುಪಯೋಗ ಪಡೆದುಕೊಳ್ಳಲು ವಿನಂತಿಸಿದ್ದರು. ಶಿಬಿರದಲ್ಲಿ ಪ್ರೊ. ವಾಗೇಶ ರೇಶ್ಮೆ, ದೈಹಿಕ ಶಿಕ್ಷಕ ವೀರಣ್ಣ ಬಡಿಗೇರ ಹಾಗೂ ರೋಟರಿ ಸಂಸ್ಥೆಯ ಸದಸ್ಯರಾದ ರೊ. ಶಿವಾಚಾರ್ಯ ಹೊಸಳ್ಳಿಮಠ, ಡಾ. ಆರ್.ಬಿ. ಉಪ್ಪಿನ, ಗ್ರಾಮದ ಹಿರಿಯರಾದ ಮರಡ್ಡಿ ಮುಂತಾವರು ಉಪಸ್ಥಿತರಿದ್ದರು. ಎನ್‌ಎಸ್‌ಎಸ್ ಶಿಬಿರ ಸಂಯೋಜಕ ವಿಠ್ಠಲ ತಳವಾರ ಸ್ವಾಗತಿಸಿ ಪುಷ್ಪಗುಚ್ಛ ನೀಡಿದರು. ಕೆಎಲ್‌ಇ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಗೃಹ ವಿಜ್ಞಾನ ವಿಭಾಗದ ಮುಖ್ಯಸ್ಥೆ ವೀಣಾ ತಿರ್ಲಾಪೂರ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

### ವಿಶ್ವ ಕ್ಯಾನ್ಸರ್ ದಿನಾಚರಣೆ ಅಂಗವಾಗಿ ಜನಜಾಗೃತಿ ಜಾಥಾ ಕಾರ್ಯಕ್ರಮ

# 30 ವರ್ಷ ಮೇಲ್ಪಟ್ಟವರು ಕ್ಯಾನ್ಸರ್ ತಪಾಸಣೆ ಮಾಡಿಸಿಕೊಳ್ಳಿ

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸಮೀಕ್ಷಾ ಘಟಕ, ಜಿಲ್ಲಾ ಎನ್.ಸಿ.ಡಿ. ಘಟಕ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ಜಿಮ್ಸ್, ಜಿಲ್ಲಾ ಆಸ್ಪತ್ರೆ, ಜಿಲ್ಲಾ ಆಯುಷ ಇಲಾಖೆ, ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಮ್ಸ್ ಮೆಡಿಕಲ್ ಮತ್ತು ನರ್ಸಿಂಗ್ ಕಾಲೇಜ್, ಸ್ಫೂರ್ತಿ ಪ್ಯಾರಾ ಮೆಡಿಕಲ್ ಕಾಲೇಜ್, ಮುನ್ಸಿಪಲ್ ಕಾಲೇಜ್ ಹಾಗೂ ವಿವಿಧ ಸಂಘ-ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ 'ಆರೈಕೆಯ ಅಂತರವನ್ನು ಕಡಿತಗೊಳಿಸಿ' ಘೋಷ ವಾಕ್ಯದೊಂದಿಗೆ ವಿಶ್ವ ಕ್ಯಾನ್ಸರ್ ದಿನಾಚರಣೆಯ ಅಂಗವಾಗಿ ಕರಿಗೆ ಕ್ಯಾನ್ಸರ್ ರೋಗದ ಕುರಿತು ಜನಜಾಗೃತಿ ಮೂಡಿಸುವ ಜಾಥಾ ಕಾರ್ಯಕ್ರಮವನ್ನು ಸೋಮವಾರ ಹಮ್ಮಿಕೊಳ್ಳಲಾಗಿತ್ತು.

ನಗರದ ಮುನ್ಸಿಪಲ್ ಜೂನಿಯರ್ ಕಾಲೇಜ ಆವರಣ ಆವರಣದಿಂದ ಗಾಂಧಿ ವೃತ್ತ, ಮಹೇಂದ್ರಕರ ಸರ್ಕಲ್, ಟಾಂಗಾಕೂಟ ಮಾರ್ಗವಾಗಿ ಹಳೇ ಬಸ್ ನಿಲ್ದಾಣ, ರೋಟರಿ ಸರ್ಕಲ್ ಮಾರ್ಗವಾಗಿ, ಹಳೇ ಜಿಲ್ಲಾ ಆಸ್ಪತ್ರೆಯವರೆಗೆ ಜಾಥಾ ಹಮ್ಮಿಕೊಳ್ಳಲಾಗಿತ್ತು.

ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ನಿರ್ದೇಶಕ ಡಾ.ಬಸವರಾಜ ಬೊಮ್ಮನಹಳ್ಳಿ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್.ಎಸ್. ನೀಲಗುಂದ ಹಸಿರು ನಿಶಾನೆ ತೋರಿಸುವ ಮೂಲಕ ಜಾಥಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.



> ದೇಹದ ಯಾವುದೇ ಭಾಗದಲ್ಲಿ ಗಡ್ಡೆ ಕಂಡುಬಂದಲ್ಲಿ ಕೂಡಲೇ ಪರೀಕ್ಷೆ ಮಾಡಿಸಿಕೊಳ್ಳಬೇಕು. ಕ್ಯಾನ್ಸರ್ ರೋಗದ ಪರೀಕ್ಷೆಯ ವಿಧಾನವು ಸರಳವಾಗಿದ್ದು, ಆರಂಭಿಕ ಹಂತದಲ್ಲಿ ಪತ್ತೆ ಮಾಡಿದ್ದಲ್ಲಿ ಸಂಪೂರ್ಣವಾಗಿ ಗುಣಪಡಿಸಬಹುದು. 30 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರೂ ಕಡ್ಡಾಯವಾಗಿ ವರ್ಷದಲ್ಲಿ ಕನಿಷ್ಠ ಒಂದು ಬಾರಿಯಾದರೂ ಬಾಯಿ, ಸ್ತನ ಹಾಗೂ ಗರ್ಭ ಕಂಠದ ಕ್ಯಾನ್ಸರ್ ತಪಾಸಣೆಯನ್ನು ಮಾಡಿಸಿಕೊಳ್ಳಬೇಕು. ಅದರಂತೆ ಕ್ಯಾನ್ಸರ್ ಖಾಯಿಲೆಗೆ ಪರಿಪೂರ್ಣ ಚಿಕಿತ್ಸೆ ಅವಶ್ಯವಿದ್ದು, ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸಿ, ಒಟ್ಟಾಗಿ ಕ್ಯಾನ್ಸರ್ ಖಾಯಿಲೆಯನ್ನು ಹತೋಟಿಗೆ ತರಬಹುದು ಮತ್ತು ಸುಮಾರು ಶೇ. 40 ಕ್ಯಾನ್ಸರ್‌ಗಳನ್ನು ಆರಂಭಿಕ ಹಂತದಲ್ಲಿ ಪತ್ತೆ ಮಾಡಿದಲ್ಲಿ ಸಂಪೂರ್ಣವಾಗಿ ಗುಣಪಡಿಸಬಹುದು.
>
> **– ಡಾ.ಬಸವರಾಜ ಬೊಮ್ಮನಹಳ್ಳಿ,** ಜಿಮ್ಸ್ ನಿರ್ದೇಶಕರು.

ಜಿಮ್ಸ್ ನಿರ್ದೇಶಕ ಡಾ.ಬಸವರಾಜ ಬೊಮ್ಮನಹಳ್ಳಿ ಮಾತನಾಡಿ, ವಿಶ್ವದಲ್ಲಿ ಪ್ರತಿ ವರ್ಷ ಸುಮಾರು 1.25 ಕೋಟಿ ಜನರು ಕ್ಯಾನ್ಸರ್ ರೋಗಕ್ಕೆ ತುತ್ತಾಗುತ್ತಿದ್ದು, ಅವರಲ್ಲಿ ಸುಮಾರು 90 ಲಕ್ಷ ರೋಗಿಗಳು ಮರಣ ಹೊಂದುತ್ತಿದ್ದಾರೆ. ನಮ್ಮ ದೇಶದಲ್ಲಿ ಕ್ಯಾನ್ಸರ್ ರೋಗಕ್ಕೆ ಪ್ರತಿ ವರ್ಷ ಸುಮಾರು 16 ಲಕ್ಷ ಜನರು ತುತ್ತಾಗುತ್ತಿದ್ದು, ಅವರಲ್ಲಿ ಸುಮಾರು 9 ಲಕ್ಷ ರೋಗಿಗಳು ಮರಣ ಹೊಂದುತ್ತಿದ್ದಾರೆ ಎಂದರು.

ಜಿಲ್ಲಾ ಸಮೀಕ್ಷಣಾಧಿಕಾರಿ ಡಾ.ವೆಂಕಟೇಶ ರಾಠೋಡ ಪ್ರಾಸ್ತಾವಿಕವಾಗಿ ಮಾತನಾಡಿ, ಜಗತ್ತಿನಲ್ಲಿ ಪ್ರತಿ ವರ್ಷ ಅಸಾಂಕ್ರಾಮಿಕ ಕಾಯಿಲೆಗಳಿಂದ ಸಾವು ಸಂಭವಿಸುತ್ತಿರುವುದರಲ್ಲಿ ಹೃದಯ ಸಂಬಂಧಿತ ರೋಗಗಳ ನಂತರ ಕ್ಯಾನ್ಸರ್ 2ನೇ ಸ್ಥಾನದಲ್ಲಿದೆ. ಅನಿಯಂತ್ರಿತ ಜೀವಕೋಶಗಳ ವಿಭಜನೆಗಳಿಂದ ಕ್ಯಾನ್ಸರ್ ಸಂಭವಿಸುತ್ತಿದ್ದು, ಅವುಗಳಲ್ಲಿ ಈಗಾಗಲೇ ಗರ್ಭಕಂಠದ ಕ್ಯಾನ್ಸರ್ ತಡೆಯಲು ಚುಚ್ಚುಮದ್ದು ಲಭ್ಯವಿದೆ. ಮುಂದಿನ ದಿನಗಳಲ್ಲಿ ಹೆಣ್ಣು ಮಕ್ಕಳಿಗೆ 9ರಿಂದ 14 ವರ್ಷದ ಅವಧಿಯಲ್ಲಿ ಚುಚ್ಚುಮದ್ದನ್ನು ನೀಡಲಾಗುತ್ತದೆ ಎಂದು ತಿಳಿಸಿದರು.

ರಾಷ್ಟ್ರೀಯ ಅಸಾಂಕ್ರಾಮಿಕ ರೋಗಗಳ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ (NP-NCD) ಸಾಮಾನ್ಯ ಕ್ಯಾನ್ಸರ್‌ಗಳಾದ ಬಾಯಿ, ಸ್ತನ ಹಾಗೂ ಗರ್ಭಕಂಠದ ಕ್ಯಾನ್ಸರ್ ತಪಾಸಣೆಯನ್ನು ಜಿಲ್ಲೆಯಲ್ಲಿ ಪ್ರತಿಯೊಂದು ಆರೋಗ್ಯ ಕೇಂದ್ರಗಳಲ್ಲಿ ಮಾಡಲಾಗುತ್ತಿದ್ದು, 30 ವರ್ಷ ಮೇಲ್ಪಟ್ಟವರು ತಪಾಸಣೆ ಮಾಡಿಸಿಕೊಳ್ಳಬೇಕೆಂದು ತಿಳಿಸಿದರು.

ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ. ಮೀನಾಕ್ಷಿ, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ಅರುಂಧತಿ ಕುಲಕರ್ಣಿ, ಪೊಲೀಸ್ ಸಬ್‌ಇನ್ಸಪೆಕ್ಟರ್ ವಿಜಯಕುಮಾರ ತಳವಾರ, ತಾಲೂಕಾ ಆರೋಗ್ಯಾಧಿಕಾರಿ ಡಾ.ಪ್ರೀತ ಖೋನಾ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ರೂಪಸೇನ್ ಚವ್ಹಾಣ, ನ.ಆ.ಕೇಂದ್ರ ಬೆಟಗೇರಿಯ ವೈದ್ಯಾಧಿಕಾರಿ ಡಾ. ಮಧುಮತಿ, ಜಿಲ್ಲಾ ಸಮೀಕ್ಷಾ ಘಟಕದ ಸಿಬ್ಬಂದಿಗಳು ಹಾಗೂ ಆರೋಗ್ಯ ಇಲಾಖೆಯ ಅಧಿಕಾರಿ ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು, ಪೊಲೀಸ್ ಇಲಾಖೆಯ ಅಧಿಕಾರಿ-ಸಿಬ್ಬಂದಿಗಳು, ಜಿಮ್ಸ್ ಮೆಡಿಕಲ್, ನರ್ಸಿಂಗ ಕಾಲೇಜ್, ಸ್ಫೂರ್ತಿ ಪ್ಯಾರಾ ಮೆಡಿಕಲ್ ಕಾಲೇಜ್, ಮುನ್ಸಿಪಲ್ ಕಾಲೇಜ್‌ನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಎಸ್.ಎಸ್. ಪೀರಾ ಕಾರ್ಯಕ್ರಮ ನಿರೂಪಿಸಿದರು.

> ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಎಸ್.ಎಸ್. ನೀಲಗುಂದ ಮಾತನಾಡಿ, ಕ್ಯಾನ್ಸರ್ ಕಾಯಿಲೆಯಲ್ಲಿ ಮುನ್ನೆಚ್ಚರಿಕೆ ಮತ್ತು ಆರಂಭಿಕ ಹಂತದಲ್ಲಿ ಪತ್ತೆ ಮಾಡುವುದು ಮುಖ್ಯ. ಪ್ರಸ್ತುತ ಕ್ಯಾನ್ಸರ್ ಕಾಯಿಲೆಯಿಂದ ಸಾವು-ನೋವುಗಳು ಹೆಚ್ಚಾಗುತ್ತಿದೆ. ಕ್ಯಾನ್ಸರ್ ರೋಗಕ್ಕೆ ಆಧುನಿಕ ಜೀವನ ಶೈಲಿ, ತಂಬಾಕು ಸೇವನೆ, ಮದ್ಯಪಾನ, ಅಹಿತಕರ ಆಹಾರ ಸೇವನೆ, ಅಧಿಕ ತೂಕ ಹಾಗೂ ಮಾನಸಿಕ ಒತ್ತಡ ಇತ್ಯಾದಿಗಳು ಕಾರಣವಾಗುತ್ತಿದ್ದು, ಸಾರ್ವಜನಿಕರು ಜಾಗರೂಕ ರಾಗಿರಲು ತಿಳಿಸಿದರು.

### ಕಸಾಪದಿಂದ ನಾರಾಯಣಭಟ್ ಶಿವಪೂರ ದತ್ತಿ ಉಪನ್ಯಾಸ

# ಕಥಾ ಕೀರ್ತನ ಕಲೆಗೆ ಪ್ರೋತ್ಸಾಹ ಅಗತ್ಯ



**■ವಿಜಯಸಾಕ್ಷಿ ಸುದ್ದಿ, ಗದಗ**

ಅತ್ಯಂತ ಕಠಿಣವಿರುವ ಸಂಗತಿಗಳನ್ನು ಸರಳವಾಗಿ ಅರ್ಥೈಸಿಕೊಳ್ಳುವ ರೀತಿಯಲ್ಲಿ ಜನಮಾನಸಕ್ಕೆ ತಲುಪಿಸುವ ಶಕ್ತಿ ಕಥಾ ಕೀರ್ತನಕ್ಕಿದೆ. ಯಾವುದೇ ಪ್ರಚಾರ ಮಾಧ್ಯಮಗಳು ಇಲ್ಲದ ಕಾಲದಲ್ಲಿ ಆದರ್ಶ ಜೀವನಕ್ಕೆ ಅಗತ್ಯವಿರುವ ಮೌಲ್ಯಗಳನ್ನು ಮನಮುಟ್ಟುವಂತೆ ಕೀರ್ತನಕಾರರು ಪ್ರಸ್ತುತಪಡಿಸುತ್ತಿದ್ದರು. ಬದಲಾದ ಕಾಲಘಟ್ಟದಲ್ಲಿ ಈ ಕಲೆಗೆ ಪ್ರೋತ್ಸಾಹ ಅಗತ್ಯವಿದೆ ಎಂದು ಕಥಾಕೀರ್ತನಕಾರರಾದ ಸಿದ್ಧೇಶ್ವರಶಾಸ್ತ್ರಿಗಳು ತೆಲ್ಲೂರ ಅಭಿಪ್ರಾಯಪಟ್ಟರು.

ಅವರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ತೋಂಟದ ಸಿದ್ಧಲಿಂಗಶ್ರೀ ಕನ್ನಡ ಭವನ, ಕಸಾಪ ಕಾರ್ಯಾಲಯ ಗದಗ ಇಲ್ಲಿ ಜರುಗಿದ ದಿ. ನಾರಾಯಣಭಟ್ ಶಿವಪೂರ ಇವರ ಸ್ಮರಣಾರ್ಥ ದತ್ತಿ ಕಾರ್ಯಕ್ರಮದಲ್ಲಿ ಶಿವಶರಣೆ ಅಕ್ಕಮಹಾದೇವಿ ಅವರು ಕುರಿತು ಕೀರ್ತನೆಯನ್ನು ನಡೆಸಿ ಮಾತನಾಡಿದರು. ಪೌರಾಣಿಕ ಸನ್ನಿವೇಶಗಳು, ಶರಣರ ಜೀವನ ಚರಿತ್ರೆ ಮುಂತಾದ ವಿಷಯಗಳನ್ನು ರಸವತ್ತಾಗಿ ಸಂಗೀತ ಪ್ರಧಾನತೆಯಿಂದ ಜನಮಾನಸಕ್ಕೆ ತಲುಪಿಸಬಹುದಾಗಿದೆ ಎಂದರಲ್ಲದೆ, ಅಕ್ಕಮಹಾದೇವಿಯ ಬಾಲ್ಯದಿಂದ ಹಿಡಿದು ಕದಳಿವನಕ್ಕೆ ಸಾಗುತ ಸಂದರ್ಭವನ್ನು ಸುಂದರವಾಗಿ ನಿರೂಪಿಸಿದರು.

ಡಾ. ದತ್ತಪ್ರಸನ್ನ ಪಾಟೀಲರು ನಾರಾಯಣಭಟ್ ಶಿವಪೂರ ಇವರ ಸಾಧನೆ ಕುರಿತು ಮಾತನಾಡಿ, ಶ್ರಮ ಸಂಸ್ಕೃತಿಗೆ ಉತ್ತಮ ಉದಾಹರಣೆಯಾಗಿದ್ದರು. ಮಾಣಿಯಿಂದ ಮಾಲೀಕರಾಗುವವರೆಗೆ ಅವರು ನಡೆದು ಬಂದ ದಾರಿಯನ್ನು ವಿವರಿಸಿದರು. ಸತತ ಪರಿಶ್ರಮ, ಶ್ರದ್ಧೆ, ಕಾಯಕನಿಷ್ಠೆ ವ್ಯಕ್ತಿಯನ್ನು ಶ್ರೇಷ್ಠತೆಯಡೆಗೆ ಕೊಂಡೊಯ್ಯುವ ಸಾಧನಗಳಾಗಿವೆ ಎಂದು ತಿಳಿಸಿದರು.

ದತ್ತಿದಾನಿಗಳಾದ ಡಾ. ಅನಂತ ಶಿವಪೂರ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತು ಅತ್ಯಂತ ಕ್ರಿಯಾಶೀಲವಾಗಿ ಕಾರ್ಯ ಮಾಡುತ್ತಿದೆ. ಗದಗ ಪರಿಸರದಲ್ಲಿ ಉತ್ತಮ ಸಾಂಸ್ಕೃತಿಕ ವಾತಾವರಣ ನಿರ್ಮಾಣವಾಗಿದೆ. ತಮ್ಮ ತಂದೆಯವರ ಹೆಸರಿನಲ್ಲಿರುವ ದತ್ತಿ ಮೊತ್ತವನ್ನು ಉನ್ನತೀಕರಿಸಲಾಗುವದು. ಅಲ್ಲದೇ ಅಯ್ಯಂಗಾರ ಗುರುಗಳ ಸ್ಮರಣೆಯಲ್ಲಿ ಪರಿಷತ್ತಿನಲ್ಲಿ ದತ್ತಿನಿಧಿಯನ್ನು ಸ್ಥಾಪಿಸಲಾಗುವದೆಂದು ತಿಳಿಸಿದರು.

ವೇದಿಕೆ ಮೇಲೆ ಡಾ. ವಾಣಿ ಶಿವಪೂರ ಉಪಸ್ಥಿತರಿದ್ದರು. ಶಾರದಾ ಕಾತರಕಿ ಸ್ವಾಗತಿಸಿದರು. ಪಾಟೀಲ ನಿರೂಪಿಸಿದರು. ಶ್ರೀ ಬಡ್ನೂರ ವಂದಿಸಿದರು.

ಕಾರ್ಯಕ್ರಮದಲ್ಲಿ ಚಂದ್ರಶೇಖರ ವಸ್ತ್ರದ, ಡಾ. ಜಿ.ಬಿ. ಪಾಟೀಲ, ವಿ.ಎಸ್. ದಲಾಲಿ, ಶಶಿಕಾಂತ ಕೊರ್ಲಹಳ್ಳಿ, ಬಸವರಾಜ ಗಣಪ್ಪನವರ, ರತ್ನಕ್ಕ ಪಾಟೀಲ, ಅಶೋಕ ಬರಗುಂಡಿ, ಎಸ್. ಎಸ್. ಕಳಸಾಪೂರಶೆಟ್ಟರ, ಎಸ್. ಆರ್. ಶಿವಪೂರ, ಮಲ್ಲಿಕಾರ್ಜುನ ಹೂಗಾರ, ಮಂಗಳಾ ತೆಲ್ಲೂರ, ಸ್ಫೂರ್ತಿ ಹಿರೇಮಠ, ಅಶೋಕ ಸತರಡ್ಡಿ, ಶ್ರೀನಿವಾಸ ಕುಲಕರ್ಣಿ, ಮಹೇಶ ಶಟವಾಜಿ, ಡಾ. ಅದ್ವೈತ ಶಿವಪೂರ, ಸಿದ್ದು ಅಂಗಡಿ, ಕೆ.ಡಿ. ನಾಡಿಗೇರ, ಬಸಯ್ಯ ಬಣಕಾರ, ಚಂದ್ರಪ್ಪ ಬಾರಂಗಿ, ಸುರೇಶ ಅಂಗಡಿ, ರತ್ನಾ ಪುರಂತರ, ಯು.ಎಸ್. ಕಣವಿ, ಎಂ.ಎಚ್. ಸವದತ್ತಿ, ಸಿ.ಎಂ. ಮಾರನಬಸರಿ, ಎಸ್.ಎಫ್. ಭಜಂತ್ರಿ, ಡಾ. ರಶ್ಮಿ ಅಂಗಡಿ, ಪಾರ್ವತಿ ಬೇವಿನಮರದ, ಶಂಕರಗೌಡ ಪಾಟೀಲ, ಜಿ.ಎ. ಪಾಟೀಲ, ಈರನಗೌಡ ಮಣಕವಾಡ, ಎಂ.ಎನ್. ಕಾಮನಹಳ್ಳಿ, ಡಿ.ಜಿ. ಕುಲಕರ್ಣಿ, ಸುರೇಶ ಕುಂಬಾರ, ಶಾಂತಲಾ ಹಂಚಿನಾಳ, ಜಯನಗೌಡ ಪಾಟೀಲ, ರಾಜಶೇಖರ ಕರಡಿ ಮೊದಲಾದವರು ಉಪಸ್ಥಿತರಿದ್ದರು.

> ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಮಾತನಾಡಿ, ಕೀರ್ತನಕಾರರು ಸಕಲಕಲಾವಲ್ಲಭರಾಗಿ ಕಾಣುತ್ತಾರೆ. ವ್ಯಾಖ್ಯಾನಕಾರ, ಹಾಡುಗಾರ, ವಾದ್ಯ ನುಡಿಸುವವರಾಗಿ ಗಮನ ಸೆಳೆಯುತ್ತಾರೆ. ಗಂಭೀರವಾಗಿರುವ ಆಧ್ಯಾತ್ಮಿಕ ವಿಚಾರಗಳನ್ನು ಅನೇಕ ಕತೆ, ಉಪಕತೆ, ಹಾಸ್ಯ, ಸಂಗೀತದ ಮೂಲಕ ಮನಸ್ಸಿಗೆ ನಾಟುವಂತೆ ತಿಳಿಸುವ ಕಲೆ ಅವರದಾಗಿದೆ. ಸಾಹಿತ್ಯ, ಸಂಗೀತ, ಕೀರ್ತನೆಯ ಮೂಲಕ ಸಾಧನೆ ಮಾಡಿರುವ ಶಾಸ್ತ್ರಿಗಳಿಗೆ ಸರಕಾರ 'ಕುಮಾರವ್ಯಾಸ' ಪ್ರಶಸ್ತಿ ನೀಡಿ ಗೌರವಿಸಿರುವುದುದು ಹೆಮ್ಮೆಯ ಸಂಗತಿಯಾಗಿದೆ ಎಂದು ತಿಳಿಸಿದರು.

### ಧಾರವಾಡದ ಪೊಲೀಸ್ ಮಕ್ಕಳ ವಸತಿ ಶಾಲೆಯ ಅಭಿವೃದ್ಧಿಗೆ ಸಹಕಾರ: ಡಾ. ಜಿ.ಪರಮೇಶ್ವರ್

# ನೈತಿಕ ಬೆಂಬಲದ ಜವಾಬ್ದಾರಿ ನಮ್ಮದು

**■ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಧಾರವಾಡದ ಎಸ್.ಎ. ಮುತ್ತಣ್ಣ ಸ್ಮಾರಕ ಪೊಲೀಸ್ ಮಕ್ಕಳ ವಸತಿ ಶಾಲೆ ಬಲವರ್ಧನೆಗೆ ಸಂಪೂರ್ಣ ಸಹಕಾರ ನೀಡುವುದಾಗಿ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಭರವಸೆ ನೀಡಿದರು.

ಅವರು ಬೆಂಗಳೂರಿನ ವಿಧಾನಪರಿಷತ್ ಸಭಾಭವನದಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಮಾತನಾಡಿ, ಧಾರವಾಡದ ಪೊಲೀಸ್ ಮಕ್ಕಳ ವಸತಿ ಶಾಲೆ ಸಾವಿರಾರು ವಿದ್ಯಾರ್ಥಿಗಳಿಗೆ ದಶಕಗಳಿಂದ ಜ್ಞಾನಾರ್ಜನೆಯನ್ನು ಕಲ್ಪಿಸಿದೆ. ರಾಜ್ಯದಲ್ಲಿಯೇ ಪೊಲೀಸ್ ಮಕ್ಕಳಿಗಾಗಿ ಇರುವ ಈ ಏಕೈಕ ಶಾಲೆಯನ್ನು ಉಳಿಸಿಕೊಂಡು ಹೋಗುವ ಜವಾಬ್ದಾರಿ ನಮ್ಮದಾಗಿದೆ.




ಕೆಲ ವರ್ಷಗಳಿಂದ ಬೇರೆ ಬೇರೆ ಕಾರಣಗಳಿಂದಾಗಿ ಶಾಲೆಯ ಅಭಿವೃದ್ಧಿಯಲ್ಲಿ ಕುಂಠಿತವಾದ ಸಂಗತಿ ನನ್ನ ಗಮನಕ್ಕಿದೆ. ಈ ಶಾಲೆಯ ಕುರಿತು ಸಭಾಪತಿ ಬಸವರಾಜ್ ಹೊರಟ್ಟಿ ಅವರು ಸಾಕಷ್ಟು ಪ್ರಯತ್ನ ಮಾಡಿ ಆಯಾ ಸರಕಾರದ ಗಮನ ಸೆಳೆದು ಶಾಲೆಯನ್ನ ಉಳಿಸಿಕೊಂಡು ಹೋಗುವಲ್ಲಿ ಶ್ರಮಿಸಿದ್ದಾರೆ. ಈ ಶಾಲೆಯ ಕುರಿತ ಹೊರಟ್ಟಿ ಅವರ ಕಳಕಳಿ ಮತ್ತು ಕಾಳಜಿಗೆ ನನ್ನ ಸಂಪೂರ್ಣ ಬೆಂಬಲ ಇದೆ ಎಂದರು.

> ಬಸವರಾಜ್ ಹೊರಟ್ಟಿ ಮಾತನಾಡಿ, ದೇಶದಲ್ಲಿಯೇ ಮೊದಲ ಮಾದರಿಯಾದ ಈ ಶಾಲೆಯನ್ನು ಉಳಿಸಿಕೊಂಡು ಹೋಗುವ ಮೂಲಕ ಪೊಲೀಸರಿಗೆ ನೈತಿಕ ಬೆಂಬಲ ಕೊಡಬೇಕಾಗಿದೆ. ಅವರ ಮಕ್ಕಳಿಗೆ ಉತ್ಕೃಷ್ಟ ಮಟ್ಟದ ಶಿಕ್ಷಣ ಸಿಗುವಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರದಾಗಿದೆ. ಗೃಹ ಸಚಿವರಾದ ಡಾ. ಜಿ. ಪರಮೇಶ್ವರ್ ಅವರ ಮೇಲೆ ನನಗೆ ಸಂಪೂರ್ಣ ವಿಶ್ವಾಸವಿದೆ ಎಂದರು.

ಈ ಸಂದರ್ಭದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಒಳಾಡಳಿತ ಇಲಾಖೆ, ಮಹಾ ನಿರ್ದೇಶಕರು ಮತ್ತು ಆರಕ್ಷಕರ ಮಹಾನಿರೀಕ್ಷಕರು, ಪೊಲೀಸ್ ಅಧೀಕ್ಷಕರು ಧಾರವಾಡ, ವಿಶೇಷ ಕಾರ್ಯದರ್ಶಿಗಳು ಒಳ ಆಡಳಿತ (ಪೊಲೀಸ್ ಸೇವೆ) ಇಲಾಖೆಯ ಡಾ. ಮಂಗಳ ಜಿ.ಎಸ್., ಎ.ಡಿ.ಜಿ.ಪಿ ಸುಮಂಗಲ, ಸಭಾಪತಿಯವರ ವಿಶೇಷ ಕರ್ತವ್ಯಾಧಿಕಾರಿ ಡಾ. ಮಹೇಶ್ ವಾಲ್ವೇಕರ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಮಳೆ ನೀರು ಸಂಗ್ರಹಣೆ ಜಾಗೃತಿ ಕಾರ್ಯಕ್ರಮ



**■ವಿಜಯಸಾಕ್ಷಿ ಸುದ್ದಿ, ಗದಗ**

ನೆಹರು ಯುವ ಕೇಂದ್ರ, ಕ್ರೀಡಾ ಸಚಿವಾಲಯ ಗದಗ, ಮದರ್ ಥೆರೆಸಾ ಮಹಿಳಾ ಮಂಡಲಗಳ ವತಿಯಿಂದ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದಲ್ಲಿ ಮಳೆ ನೀರು ಸಂಗ್ರಹಣೆ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸಮಾಜ ಕಲ್ಯಾಣ ಇಲಾಖೆಯ ಅಧೀಕ್ಷಕರಾದ ಅರುಣಾ ಸ್ವರ್ಗಾವಿ ಕಾರ್ಯಕ್ರಮ ಉದ್ಘಾಟಿಸಿದರು. ಸಮಾಜ ಕಲ್ಯಾಣ ಇಲಾಖೆ ಮುಂಡರಗಿಯ ಸಹಾಯಕ ನಿರ್ದೇಶಕ ಉದಯಕುಮಾರ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಜಿ.ಪಂ ಮಾಜಿ ಉಪಾಧ್ಯಕ್ಷೆ ಶೋಭಾ ಮೇಟಿ ಪಾಲ್ಗೊಂಡಿದ್ದರು. ಡಾ. ಪಿ.ಬಿ. ಹಿರೇಗೌಡರ್ ಉಪನ್ಯಾಸ ನೀಡಿದರು.

ಸಾವಿತ್ರಿ ಬಿ. ಪ್ರಾರ್ಥಿಸಿದರು. ಮಂಜುಳಾ ಇಟಗಿ ಸ್ವಾಗತಿಸಿದರು. ವಿದ್ಯಾರ್ಥಿನಿ ನೇತ್ರಾ ಕಾರ್ಯಕ್ರಮ ನಿರೂಪಿಸಿದರು. ರಾಜೇಶ್ವರಿ ವಂದಿಸಿದರು.

# ಸರ್ಕಾರದ ಹಣವನ್ನು ರೈತರಿಗೇ ನೀಡಿ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಸರ್ಕಾರದ ವಿವಿಧ ಯೋಜನೆಗಳಿಂದ ರೈತರ ಖಾತೆಗಳಿಗೆ ಜಮೆಯಾಗುವ ಹಣವನ್ನು ಯಾವುದೇ ಸಾಲದ ಖಾತೆಗಳಿಗೆ ಸರಿದೂಗಿಸದೆ, ರೈತರಿಗೆ ನೀಡುವಂತೆ ಎಲ್ಲ ಬ್ಯಾಂಕುಗಳಿಗೆ ನಿರ್ದೇಶನ ನೀಡುವ ಆದೇಶ ಮಾಡಬೇಕೆಂದು ಆಗ್ರಹಿಸಿ ಭಾರತೀಯ ಕಿಸಾನ್ ಸಂಘದ ಅಧ್ಯಕ್ಷ ಟಾಕಪ್ಪ ಸಾತಪುತೆ ನೇತೃತ್ವದಲ್ಲಿ ತಹಸೀಲ್ದಾರರಿಗೆ ಸೋಮವಾರ ಮನವಿ ಸಲ್ಲಿಸಲಾಯಿತು.

ಗದಗ ಜಿಲ್ಲೆಯನ್ನು ಸಕಾರ ಬರಗಾಲ ಪ್ರದೇಶವೆಂದು ಘೋಷಿಸಿದೆ. ಸದ್ಯದ ಪರಿಸ್ಥಿತಿಯಲ್ಲಿ ರೈತರು, ಕೂಲಿಕಾರರ ಕುಟುಂಬ ನಿತ್ಯದ ಜೀವನ ಸಾಗಿಸುವುದೇ ಕಷ್ಟಕರವಾಗಿದೆ.



ಸರಕಾರದಿಂದ ರೈತರ ಖಾತೆಗೆ ಜಮೆ ಆದ ಬೆಳೆ ವಿಮೆ, ಬೆಳೆಹಾನಿ ಪರಿಹಾರ, ಪಿ.ಎಂ. ಕಿಸಾನ್ ಮತ್ತು ವೃದ್ಧಾಪ್ಯ ವೇತನ ಇನ್ನಿತರೆ ಹಣವನ್ನು ರೈತರಿಗೆ ನೀಡಲು ಬ್ಯಾಂಕ್‌ನವರು ಸತಾಯಿಸುತ್ತಿದ್ದಾರೆ. ಈ ಹಣವನ್ನು ರೈತರ ಸಾಲಕ್ಕೆ ಜಮೆ ಮಾಡುತ್ತಿದ್ದಾರೆ. ಅಳಲನ್ನು ತೋಡಿಕೊಂಡರೂ ಕೇಳುತ್ತಿಲ್ಲ. ಈ ಕುರಿತು ಸಂಬಂಧಿಸಿದ ಎಲ್ಲ ಬ್ಯಾಂಕುಗಳ ಅಧಿಕಾರಿಗಳನ್ನು ಕರೆಯಿಸಿ ರೈತರ ಖಾತೆಗೆ ಸರಕಾರದಿಂದ ಜಮಾ ಆದ ಹಣವನ್ನು ಯಾವುದೇ ನಿರ್ಬಂಧವಿಲ್ಲದೇ ನೀಡಲು ತಾಕೀತು ಮಾಡಬೇಕು ಎಂದು ಆಗ್ರಹಿಸಿದರು.

ಗ್ರೇಡ್-2 ತಹಸೀಲ್ದಾರ ಮಂಜುನಾಥ ಅಮಾಸಿ ಮನವಿ ಸ್ವೀಕರಿಸಿ, ಈ ಕುರಿತಂತೆ ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವದು ಎಂದರು.

ಈ ವೇಳೆ ರೈತ ಮುಖಂಡರಾದ ಆದೇಶ ಹುಲಗೂರ, ಅಬ್ದುಲ ಮುನಾಫ್, ಹನುಮಂತಪ್ಪ ಬೆಟಗೇರಿ, ಕರಿಯಪ್ಪ ಹುರಕನವರ, ಅಶೋಕ ಹುಲಗೂರ, ಚನ್ನಬಸಪ್ಪ ಅಲನೂರ, ಫಕ್ಕೀರೇಶ ಹಂಚಿನಾಳ ಮತ್ತಿತರಿದ್ದರು.

# ದೇಶದ ಭವಿಷ್ಯ ರೂಪಿಸಲು ಕೈಜೋಡಿಸಿ

▶▶ಮೊದಲನೇ ಪುಟದಿಂದ

ವಿಶ್ವದ ಇತಿಹಾಸದಲ್ಲಿ ಸ್ವಾಮಿ ವಿವೇಕಾನಂದರು ಯುವಕರ ಕಣ್ಮಣಿಯಾಗಿದ್ದು, ಶ್ರದ್ಧೆ, ಸಹನೆ, ಸತತ ಪ್ರಯತ್ನ ಜಯ ಸಾಧಿಸಲು ಅಗತ್ಯವಾಗಿ ಬೇಕಾದ ಮೂರು ಸಾಧನಗಳು. ಇದರೊಂದಿಗೆ ಆತ್ಮವಿಶ್ವಾಸವಿದ್ದರೆ ಮಾತ್ರ ವಿಜಯಶಾಲಿಗಳಾಗಬಹುದು ಎಂದರಲ್ಲದೆ, ರಕ್ತದಾನ ಮಹತ್ವವನ್ನು ತಿಳಿಸುತ್ತಾ ರಕ್ತದಾನ ಮಹಾದಾನ, ರಕ್ತದಾನ ಜೀವದಾನ, ರಕ್ತದಾನ ಶ್ರೇಷ್ಠದಾನವಾಗಿದೆ. ರೋಗಿಯ ಜೀವ ಉಳಿಸಲು ವೈದ್ಯರಾಗಬೇಕಿಲ್ಲ, ರಕ್ತದಾನ ಮಾಡಿದರೆ ಸಾಕು ಎಂದು ತಿಳಿಸಿದರು.

ಕಾಲೇಜಿನ ಪ್ರಾಚಾರ್ಯ ನಾಯ್ಕರ ಅಧ್ಯಕ್ಷೀಯ ನುಡಿಗಳನ್ನಾಡಿದರು. ಎ.ಎಸ್.ಎಸ್. ಕಾಲೇಜಿನ ಪ್ರಾಧ್ಯಾಪಕರು, ಆರೋಗ್ಯ ಇಲಾಖೆಯ ಸಿಬ್ಬಂದಿ, ಎ.ಎಸ್.ಎಸ್. ಕಾಲೇಜಿನ ಹಿರಿಯ ಎನ್.ಎಸ್.ಎಸ್. ಸೇವಕರು ಹಾಜರಿದ್ದರು. ಮಹಾವಿದ್ಯಾಲಯದ ಬಾಹುಬಲಿ ಜೈನರ ಸ್ವಾಗತಿಸಿದರು. ಮೇಘಾ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಗಿರಿಮಲ್ಲಿಕಾ ವಂದಿಸಿದರು.

# ಸೌಕರ್ಯಗಳ ಅಭಿವೃದ್ಧಿಗೆ ಪ್ರಯತ್ನ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ತಾಲೂಕಿನ ಗೋವನಾಳ ಗ್ರಾಮದಲ್ಲಿ ಸೋಮವಾರ ಶಾಸಕ ಡಾ.ಚಂದ್ರು ಲಮಾಣಿ ಗ್ರಂಥಾಲಯ ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿದರು. ಬಳಿಕ ಗೋವನಾಳ ಗ್ರಾ.ಪಂ ವ್ಯಾಪ್ತಿಯ ಗುಲಗಂಜಿಕೊಪ್ಪ ಗ್ರಾಮದ ಶಾಲೆಗೆ ಭೇಟಿ ನೀಡಿ, ಗ್ರಾಮಸ್ಥರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿ, ನನ್ನ ಮೇಲೆ ಅಪಾರವಾದ ಗೌರವ, ನಂಬಿಕೆಯಿಟ್ಟು ಸೇವೆ ಮಾಡಲು ಅವಕಾಶ ಕೊಟ್ಟಿದ್ದೀರಿ. ನಿಮ್ಮ ವಿಶ್ವಾಸಕ್ಕೆ, ನಂಬಿಕೆಗೆ ಎಂದಿಗೂ ಧಕ್ಕೆ ತರದಂತೆ ಕೃಷಿಕರ, ಕಾರ್ಮಿಕರ,



ಬಡವರ ಏಳಿಗೆಗಾಗಿ, ಶಿಕ್ಷಣ, ಆರೋಗ್ಯ ಕ್ಷೇತ್ರವನ್ನು ಅಭಿವೃದ್ಧಿಪಡಿಸುವದರೊಂದಿಗೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ಈ ಸಂದರ್ಭದಲ್ಲಿ ಗ್ರಾ.ಪಂ ಅಧ್ಯಕ್ಷ ಮಂಜನಗೌಡ ಕೆಂಚನಗೌಡ್ರ, ನಿರ್ಮಲಾ ತಳವಾರ, ಅಣ್ಣಪ್ಪ ರಾಮಗೇರಿ, ಸುಶೀಲಮ್ಮ ಮರಿಲಿಂಗನಗೌಡ್ರ ಕರಿಯಪ್ಪಗೌಡ ಹೊಸಗೌಡ್ರ, ಗಂಗಾಧರ ಮಾದರ, ಚಂದ್ರಗೌಡ ಕರಿಗೌಡರ, ಬಸವರಾಜ ಮಲ್ಲೂರ, ಈರನಗೌಡ ನಾಗನಗೌಡ್ರ, ದುಂಡಪ್ಪ ತೇಲಿ ಸೇರಿದಂತೆ ಗ್ರಾ.ಪಂ ಸದಸ್ಯರು, ಹಿರಿಯರು ಇದ್ದರು.



**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಅಗಡಿ ಸನ್‌ರೈಸ್ ಆಸ್ಪತ್ರೆಯ ಸ್ತ್ರೀ ರೋಗ ತಜ್ಞ ವೈದ್ಯರಾದ ಡಾ. ರೇಷ್ಮಾ ರಾಠೋಡ, ಡಾ. ಸುಜಾತಾ ಸಂಗೂರ, ಹೃದಯರೋಗ ತಜ್ಞರಾದ ಡಾ. ರಾಜಶೇಖರ ಮೂಲಿಮನಿ ಮತ್ತು ಡಾ. ಮುಕುಂದ(ಅರವಳಿಕೆ) ವೈದ್ಯರ ತಂಡ 40 ವರ್ಷದ ಮಹಿಳೆಯ ಗರ್ಭಕೋಶದಲ್ಲಿ ಬೆಳೆದ 1.5 ಕೆ.ಜಿ ಗಡ್ಡೆಯನ್ನು ಶಸ್ತ್ರ ಚಿಕಿತ್ಸೆಯ ಮೂಲಕ ಯಶಸ್ವಿಯಾಗಿ ಹೊರ ತೆಗೆದಿದ್ದಾರೆ. ಚಿಕಿತ್ಸೆಗೊಳಗಾದ ಮಹಿಳೆ ಆರೋಗ್ಯವಾಗಿದ್ದು, ವೈದ್ಯರ ಕಾರ್ಯಕ್ಕೆ ಕುಟುಂಬವರ್ಗ ಹರ್ಷ ವ್ಯಕ್ತಪಡಿಸಿದೆ.

# ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ

■ವಿಜಯಸಾಕ್ಷಿ ಸುದ್ದಿ, ಗದಗ

ಕೌಶಲ್ಯಾಭಿವೃದ್ಧಿ ಉದ್ಯಮ ಶೀಲತೆ ಹಾಗೂ ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲ್ಯಭಿವೃದ್ಧಿ ನಿಗಮ ಬೆಂಗಳೂರು ಇವರ ಪ್ರಾಯೋಜಕತ್ವದಲ್ಲಿ ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ ಧಾರವಾಡ ಇವರು ಸ್ವಯಂ ಉದ್ಯೋಗ ಕೈಗೊಳ್ಳಲು ಇಚ್ಛಿಸುವವರಿಗೆ 10 ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮವನ್ನು ಇದೇ ಫೆಬ್ರುವರಿ ತಿಂಗಳ ಕೊನೆಯ ವಾರದಲ್ಲಿ ಹಮ್ಮಿಕೊಂಡಿದೆ.

ಸ್ವಂತ ಉದ್ಯಮ ಸ್ಥಾಪಿಸಲು ಅನುಸರಿಸಬೇಕಾದ ಕ್ರಮಗಳು, ಸರ್ಕಾರದ ಯೋಜನೆಗಳು, ಬ್ಯಾಂಕಿನ ವ್ಯವಹಾರಗಳ, ಮಾರುಕಟ್ಟೆ ಸಮೀಕ್ಷೆ , ಯೋಜನಾ ವರದಿ ತಯಾರಿಕೆ, ಉದ್ಯಮ ನಿರ್ವಹಣೆ, ಇತ್ಯಾದಿ ವಿಷಯಗಳ ಕುರಿತು ತರಬೇತಿಯನ್ನು ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಸಿಡಾಕ್ ಜಿಲ್ಲಾ ಕಚೇರಿ, ರೂಂ ನಂ. 106, ಜಿಲ್ಲಾ ಆಡಳಿತ ಭವನ ಗದಗ ಈ ವಿಳಾಸಕ್ಕೆ ಸಂಪರ್ಕಿಸಬಹುದಾಗಿದೆ. ಭಾಗವಹಿಸುವವರು ಕನಿಷ್ಠ 18 ವರ್ಷದವರಾಗಿರಬೇಕು. ಎಸ್.ಎಸ್.ಎಲ್.ಸಿ. ಪಾಸಾಗಿರಬೇಕು. ಮಹಿಳೆಯರಿಗೆ ಆದ್ಯತೆ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 77958 55847, 8722759959 ಸಂಪರ್ಕಿಸಬಹುದಾಗಿದೆ.

# ಯೋಗ ಮಹಾವಿದ್ಯಾಲಯ ಸ್ಥಾಪನೆ

■ವಿಜಯಸಾಕ್ಷಿ ಸುದ್ದಿ, ಗದಗ

ಯಳಂದೂರ ಬಸವಲಿಂಗ ಸ್ವಾಮಿಗಳ ಸ್ಮಾರಕ ಬಸವ ಯೋಗ ಕೇಂದ್ರದ ಆಶ್ರಯದಲ್ಲಿ ನೂತನ ಯೋಗ ಮಹಾವಿದ್ಯಾಲಯದ ಕಟ್ಟಡಕ್ಕೆ ದೇಣಿಗೆ ಸಂಗ್ರಹ ಹಾಗೂ ಆರೋಗ್ಯ-ಯೋಗ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ತೋಂಟದಾರ್ಯ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಎಸ್.ಎಸ್. ಪಟ್ಟಣಶೆಟ್ಟಿ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಳಂದೂರ ಬಸವಲಿಂಗ ಶ್ರೀಗಳು ಯೋಗ ಸಾಧಕರಾಗಿದ್ದರು. ಡಂಬಳ ತೋಂಟದಾರ್ಯ ಮಠದಲ್ಲಿದ್ದು ಯೋಗ ಸಾಧನೆಯನ್ನು ಪ್ರಚುರಪಡಿಸಿದ್ದಾರೆ. ಅವರ ಸ್ಮರಣಾರ್ಥ 1976ರಲ್ಲಿ ಗದಗದಲ್ಲಿ ಬಸವ ಯೋಗ ಪಾಠ ಶಾಲೆ ಆರಂಭಿಸಲಾಯಿತು.




ಭವಿಷ್ಯದಲ್ಲಿ ಯೋಗ ವಿದ್ಯೆಗೆ ಮಹತ್ವ ಬರುತ್ತದೆ ಎನ್ನುವ ದೂರದೃಷ್ಟಿ ಹೊಂದಿದ್ದ ಲಿಂ. ತೋಂಟದ ಸಿದ್ಧಲಿಂಗ ಶ್ರೀಗಳು, ಯೋಗ ಸಾಧನೆಗ ಸಾಕಷ್ಟು ಮಹತ್ವ ನೀಡಿದ್ದರು ಎಂದರು.

1976ರಿಂದ ಕಾರ್ಯಾರಂಭ ಮಾಡಿರುವ ಬಸವ ಯೋಗ ಕೇಂದ್ರ ಸದ್ಯ ಕವಿವಿ ಯೋಗ ಸರ್ಟಿಫಿಕೇಟ್ ಕೋರ್ಸ್ ಮತ್ತು ಡಿಪ್ಲೋಮಾ ಕೋರ್ಸ್ ಯಶಸ್ವಿಯಾಗಿ ನಡೆಸುತ್ತಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಯೋಗ ಮಹಾವಿದ್ಯಾಲಯ ಸ್ಥಾಪಿಸುವ ಸಂಕಲ್ಪ ಹೊಂದಿರುವ ಕೆ.ಎಸ್. ಪಲ್ಲೇದ, ಅದಕ್ಕಾಗಿ 5 ಕೋಟಿ ರೂ. ವೆಚ್ಚದ ಬೃಹತ್ ಯೋಗ ಮಹಾವಿದ್ಯಾಲಯ ಸ್ಥಾಪಿಸುವ ಸಂಕಲ್ಪ ಹೊಂದಿದ್ದಾರೆ.

ಈ ಹಿನ್ನೆಲೆಯಲ್ಲಿ ಮುಳಗುಂದ ರಸ್ತೆಯಲ್ಲಿ ಶ್ರೀಮಠದ 2 ಎಕರೆ ಜಾಗವನ್ನು ಬಸವ ಯೋಗ ಕೇಂದ್ರಕ್ಕೆ ನೀಡಲಾಗಿದೆ. ಒಟ್ಟಾರೆ 5 ಕೋಟಿ ರೂ. ವೆಚ್ಚದಲ್ಲಿ ಸುಸಜ್ಜಿತ ಯೋಗ ಮಹಾವಿದ್ಯಾಲಯ ಕಾರ್ಯಾರಂಭ ಮಾಡಬೇಕು ಎನ್ನುವುದು ಯೋಗ ಕೇಂದ್ರದ ಸಮಾನ ಮನಸ್ಕರ ಇಚ್ಛೆಯಾಗಿದೆ. ಆ ಪ್ರಯತ್ನ ಶೀಘ್ರವೇ ಕೈಗೂಡಲಿ ಎಂದು ಹಾರೈಸಿದರು.

ಬಸವ ಯೋಗ ಕೇಂದ್ರದ ಕೆ.ಎಸ್. ಪಲ್ಲೇದ ಮಾತನಾಡಿ, ಯೋಗ ಜಗತ್ತಿನಾದ್ಯಂತ ಪ್ರಸಿದ್ಧಿಯಾಗುತ್ತಿದೆ. ಅದಕ್ಕಾಗಿ ಯೋಗ ಮಹಾವಿದ್ಯಾಲಯ ಆಗಬೇಕು ಎನ್ನುವುದು ಈ ಭಾಗದ ಯೋಗ ಸಾಧಕರ ಇಚ್ಛೆಯಾಗಿದೆ. ತೋಂಟದ ಸಿದ್ಧಲಿಂಗ ಶ್ರೀಗಳ 75ನೇ ಜಯಂತಿ ಅಥವಾ ಯೋಗ ಗೇಂದ್ರದ 49ನೇ ವಾರ್ಷಿಕೋತ್ಸವದ ದಿನ ಕಟ್ಟಡದ ಶಂಕುಸ್ಥಾಪನೆ ನೆರವೇರಿಸುವ ಚಿಂತನೆ ಇದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ನಿವೃತ್ತ ಪ್ರಾ. ಕೆ.ಎಚ್. ಬೇಲೂರ, ಎಂ.ಸಿ. ಐಲಿ, ಶಿವಲೀಲಾ ಅಕ್ಕಿ, ವಿ.ಎಂ. ಮುಂದಿನಮನಿ, ಕೆ.ಎಸ್. ಮುಗಳಿ, ವಿ.ಎಚ್. ಪಾಟೀಲ ಉಪಸ್ಥಿತರಿದ್ದರು.

# ನಿವೃತ್ತ ಯೋಧನಿಗೆ ಸನ್ಮಾನ



■ವಿಜಯಸಾಕ್ಷಿ ಸುದ್ದಿ, ಬೆಟಗೇರಿ

24 ವರುಷಗಳ ಕಾಲ ಕುಟುಂಬವನ್ನು ಬಿಟ್ಟು ದೇಶದ ಗಡಿ ಕಾಯುವ ಮೂಲಕ ದೇಶಪ್ರೇಮ ಮೆರೆದು, ಇದೀಗ ತವರಿಗೆ ಮರಳಿದ ಮಂಜುನಾಥ ರೋಣದ ಅವರನ್ನು ನಗರದ ಕಣವಿ ಪ್ಲಾಟನಲ್ಲಿ ಗದಗ-ಬೆಟಗೇರಿ ನಗರಸಭೆಯ ಸದಸ್ಯೆ ಶಕುಂತಲಾ ಅಕ್ಕಿಯವರ ನೇತೃತ್ವದಲ್ಲಿ ಮಂಜುನಾಥ ರೋಣದ ದಂಪತಿಗಳಿಗೆ ಸನ್ಮಾನಿಸಿ, ಗೌರವಿಸಿಲಾಯಿತು.

ಶಕುಂತಲಾ ಅಕ್ಕಿ ಮಾತನಾಡಿ, 24 ವರುಷಗಳಿಂದ ದೇಶದ ಗಡಿ ಕಾದು ಸುರಕ್ಷಿತವಾಗಿ ತಾಯ್ನಾಡಿಗೆ ಮರಳಿದ ಭಾರತ ದೇಶದ ಹೆಮ್ಮೆಯ ಪುತ್ರ ಮಂಜುನಾಥ ರೋಣದ ದಂಪತಿಗಳನ್ನು ಸನ್ಮಾನಿಸುವ ಅವಕಾಶ ಸಿಕ್ಕಿದ್ದು ನಮ್ಮ ಪುಣ್ಯ. ಇವತ್ತಿನ ಬದುಕಿನಲ್ಲಿ ಎಲ್ಲರೂ ತಮ್ಮ ವೈಯಕ್ತಿಕ ಆಸೆಗಳನ್ನು ಈಡೇರಿಕೆಗಾಗಿ ಮುಂದಾಗುವುದರಲ್ಲಿ ಇಂತಹ ದೇಶಪ್ರೇಮಿಗಳು ಶ್ರೇಷ್ಠರಾಗಿದ್ದಾರೆ ಎಂದರು.

ಗಣ್ಯ ಉದ್ಯಮಿ ಶಂಕರ ಮುಳಗುಂದ ಮಾತನಾಡಿ, ಮಂಜುನಾಥ ರೋಣದರು ದೇಶ ಸೇವೆ ಸಲ್ಲಿಸುವ ಮೂಲಕ ದೇಶಕ್ಕೆ ಉತ್ತಮ ಕೊಡುಗೆ ನೀಡಿದ್ದಾರೆ. ಇಂದಿನ ಯುವ ಪೀಳಿಗೆ ಸೈನಿಕರ ಸೇವೆಯನ್ನ ಸ್ಮರಿಸಿ, ಗೌರವಿಸುವ ಮೂಲಕ ದೇಶಪ್ರೇಮದ ವ್ಯಕ್ತಿತ್ವವನ್ನ ಮೈಗೂಡಿಸಿಕೊಂಡು ಬದುಕಲು ಕರೆ ನೀಡಿದರು.

ಸಮಾರಂಭದಲ್ಲಿ ಸಮಾಜ ಸೇವಕ ಹೊಳೆಬಸಪ್ಪ ಅಕ್ಕಿ ಸೇರಿದಂತೆ ಹಲವರಿದ್ದರು.

### ವಿಶ್ವಕರ್ಮ ಸಮುದಾಯ ಭವನದ ವಾಸ್ತುಶಾಂತಿ-ಧಾರ್ಮಿಕ ಪೂಜಾ ವಿಧಿಗಳ ಪೂರ್ವಭಾವಿ ಸಭೆ

# ಸಮುದಾಯ ಭವನ ನಿರ್ಮಾಣ ಅಂತಿಮ ಹಂತಕ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ವಿಶ್ವಕರ್ಮ ನೌಕರರ ಕ್ಷೇಮಾಭಿವೃದ್ಧಿ ಸಂಘವು ಸರ್ಕಾರ, ಸಂಘದ ಸದಸ್ಯರು ಮತ್ತು ಸಮಾಜ ಬಾಂಧವರ ಸಹಕಾರದಿಂದ ನಗರದ ವಿಜಯ ನಗರ ಬಡಾವಣೆಯಲ್ಲಿ ನಿರ್ಮಿಸುತ್ತಿರುವ ವಿಶ್ವಕರ್ಮ ಸಮುದಾಯ ಭವನ ನಿರ್ಮಾಣ ಕಾರ್ಯ ಅಂತಿಮ ಹಂತ ತಲುಪಿದ್ದು, ಸಮಾಜ ಬಾಂಧವರು ಸಹಕಾರ ನೀಡಬೇಕು ಎಂದು ಸಂಘದ ಅಧ್ಯಕ್ಷ ರಾಜಗೋಪಾಲ ಡಿ. ಕಡ್ಲಿಕೊಪ್ಪ ಕರೆ ನೀಡಿದರು.

ಅವರು ವಿಶ್ವಕರ್ಮ ನೌಕರರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಾಲಯದಲ್ಲಿ ಸಮುದಾಯ ಭವನದ ವಾಸ್ತುಶಾಂತಿ ಹೋಮ ಹಾಗೂ ಧಾರ್ಮಿಕ ಪೂಜಾ ವಿಧಿಗಳ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.



ಸಮುದಾಯ ಭವನ ಕಾಮಗಾರಿ ಪೂರ್ಣಗೊಂಡಿದ್ದು, ಅಂತಿಮ ಹಂತದಲ್ಲಿ ಆರು ಅತಿಥಿಗೃಹ ಕೊಠಡಿಗಳು, ಸ್ನಾನಗೃಹ, ಶೌಚಾಲಯಗಳ ನಿರ್ಮಾಣ ಕಾರ್ಯ ಭರದಿಂದ ಸಾಗಿದ್ದು, ಕೆಲವೇ ದಿನಗಳಲ್ಲಿ ಪೂರ್ಣಗೊಳ್ಳಲಿದೆ. ಹೀಗಾಗಿ ಇದೇ ಫೆ.18ರಂದು ವಾಸ್ತುಶಾಂತಿ ಹೋಮ ಹಾಗೂ ವಿವಿಧ ಪೂಜಾ ಕಾರ್ಯಕ್ರಮಗಳು ಜರುಗಲಿವೆ. ನಂತರ ಸಮುದಾಯ ಭವನ ಮಂಗಲ ಕಾರ್ಯಗಳಿಗೆ ಲಭ್ಯವಾಗಲಿದೆ. ಸಹಕಾರ ನಿಡಬೇಕೆನ್ನುವ ಸಮಾಜ ಬಾಂಧವರು ಕೂಡಲೇ ತನು-ಮನ-ಧನದಿಂದ ಸಹಕಾರ ನೀಡಿ, ಸಮಾಜಕ್ಕೆ ಪೂರಕವಾಗಿರುವ ಈ ಪುಣ್ಯ ಕಾರ್ಯಕ್ಕೆ ಕೈಜೋಡಿಸಬೇಕು ಎಂದರು.

ಸಭೆಯಲ್ಲಿ ಪಾಲ್ಗೊಂಡಿದ್ದ ಸಂಘದ ಹಾಗೂ ವಿವಿಧ ಸಂಘಟನೆಗಳ ಸದಸ್ಯರು ಸಲಹೆ ಸೂಚನೆಗಳ್ನು ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ಹಿರಿಯ ನಿರ್ದೇಶಕರಾದ ಬಿ.ಎಮ್. ಯರಕದ, ಎಮ್.ಎಮ್. ಸುತಾರ, ವಿಶ್ವಕರ್ಮ ವಿದ್ಯಾ ಸಂಸ್ಥೆಯ ಅಧ್ಯಕ್ಷ ಕೆ.ಎಸ್. ಬಡಿಗೇರ, ವಿಶ್ವಕರ್ಮ ಸಾಹಿತ್ಯ ಸಾಂಸ್ಕೃತಿಕ ಕಲಾ ಸಂಘದ ಅಧ್ಯಕ್ಷ ಮೌನೇಶ ಸಿ.ಬಡಿಗೇರ, ವಿಶ್ವಕರ್ಮ ಮಹಿಳಾ ಮಂಡಳ ಅಧ್ಯಕ್ಷೆ ಶಿವಲೀಲಾ ಬಡಿಗೇರ, ವಿಶ್ವಕರ್ಮ ಮಹಿಳಾ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷೆ ರಿಂದಮ್ಮ ತೋಟಗಂಟಿ, ಉಪಾಧ್ಯಕ್ಷೆ ಪುಷ್ಪಾ ವಿಶ್ವಜ್ಞ, ವಿಶ್ವಕರ್ಮ ಯುವ ಪರಿಷತ್ ಅಧ್ಯಕ್ಷ ಮಹೇಶ ಕಮ್ಮಾರ, ನಿರ್ದೇಶಕ ಪಾಂಡುರಂಗ ಪತ್ತಾರ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

ಸುಮಂಗಲಾ ಪತ್ತಾರ ಪ್ರಾರ್ಥಿಸಿದರು. ಸಿ.ಎಂ. ಪತ್ತಾರ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ವಿಶ್ವನಾಥ ಯ. ಕಮ್ಮಾರ ನಿರೂಪಿಸಿದರು. ಸೋಮಶೇಖರ ಬಡಿಗೇರ ವಂದಿಸಿದರು.

### ಆಧಾರ್ ಕಾರ್ಡ್ ತಿದ್ದುಪಡಿಗೆ ಹಣ ವಸೂಲಿ । ಜನಸಾಮಾನ್ಯರಿಗೆ ಹೊರೆ

# ಹೆಚ್ಚುವರಿ ವಸೂಲಿಗೆ ಸಾರ್ವಜನಿಕರ ಅಸಮಾಧಾನ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದಲ್ಲಿನ ಕೆಲವು ಆಧಾರ್ ಸೇವಾ ಕೇಂದ್ರಗಳು ಸೇರಿದಂತೆ ಕೆಲ ಕರ್ನಾಟಕ್ ಒನ್, ಗ್ರಾಮ ಒನ್ ಕೇಂದ್ರದಲ್ಲಿ ಆಧಾರ್ ಕಾರ್ಡ್ ಜೋಡಣೆ, ತಿದ್ದುಪಡಿಗೆ ಜನರಿಂದ ನಿಗದಿತ ದರಕ್ಕಿಂತ ಹೆಚ್ಚುವರಿ ಹಣ ವಸೂಲಿ ಮಾಡುತ್ತಿದ್ದು, ಯಾರೂ ಕೇಳುವವರಿಲ್ಲವೇ ಎಂದು ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.



ಹೊಸ ಆಧಾರ್ ಕಾರ್ಡ್, ತಿದ್ದುಪಡಿ, ಜೋಡಣೆ, ಬಯೋಮೆಟ್ರಿಕ್ ಸೇರಿ ಯಾವುದೇ ಪ್ರಕ್ರಿಯೆಗೆ ಗರಿಷ್ಠ 100 ರೂ ದರವಿದೆ. ಆದರೆ ಪಟ್ಟಣದಲ್ಲಿನ ಏಜೆನ್ಸಿ ಮೂಲಕ ಕಾರ್ಯನಿರ್ವಹಿಸುವ ಸೇವಾ ಕೇಂದ್ರಗಳಲ್ಲಿ 200 ರೂ. ಗಿಂತ ಹೆಚ್ಚು ಹಣ ವಸೂಲಿ ಮಾಡುತ್ತಿರುವ ಆರೋಪಗಳಿವೆ. ಪಟ್ಟಣದ ಯಾವುದೇ ಸೇವಾ ಕೇಂದ್ರದಲ್ಲಿ ದರದ ನಾಮಫಲಕ ಹಾಕದೆ ಬಡವರ ಜೇಬಿಗೆ ಕತ್ತರಿ ಹಾಕುವ ಕೆಲಸ ನಡೆದಿದೆ. ಆಧಾರ್ ಕಾರ್ಡ್ ಅಷ್ಟೇ ಅಲ್ಲದೇ ಸರ್ಕಾರದ ಯಾವುದೇ ಸೇವೆ ಪಡೆಯಲು ಹೆಚ್ಚುವರಿ ಹಣ ನೀಡಲೇಬೇಕಾಗಿದೆ. ರಾಜ್ಯ ಸರ್ಕಾರ ಐದು ಗ್ಯಾರಂಟಿ ಯೋಜನೆ ಜಾರಿ ಬಳಿಕವಂತೂ ಈ ದಂಧೆ ಅವ್ಯಾಹತವಾಗಿ ನಡೆದಿದೆ. ಈ ವ್ಯವಸ್ಥೆಗೆ ಜನರೂ ಹೊಂದಿಕೊಂಡಿರುವುದು ದುರ್ದೈವದ ಸಂಗತಿ.

ಆನ್‌ಲೈನ್ ಮತ್ತು ಆಧಾರ್ ಸೇವಾ ಕೇಂದ್ರಗಳಲ್ಲಿ ಆಧಾರ್ ಕಾರ್ಡ್ ಸೇರಿ ಎಲ್ಲ ಸೇವೆಗಳಿಗೆ ಹೆಚ್ಚಿನ ಹಣ ವಸೂಲಿ ಮಾಡುತ್ತಿರುವುದು ನನ್ನ ಗಮನಕ್ಕೆ ಬಂದಿರಲಿಲ್ಲ. ಏಜೆನ್ಸಿ ಸೇವಾ ಕೇಂದ್ರಗಳು, ಕರ್ನಾಟಕ ಒನ್, ಗ್ರಾಮ ಒನ್ ಸಿಬ್ಬಂದಿಯನ್ನು ಕರೆದು ಸೇವಾ ದರ ಪಟ್ಟಿ ಹಾಕುವಂತೆ ಮತ್ತು ನಿಗದಿಗಿಂತ ಹೆಚ್ಚು ಹಣ ಪಡೆಯದಂತೆ ಮತ್ತು ಮೀರಿದರೆ ಲೈಸನ್ಸ್ ರದ್ದು ಮಾಡುವ ಎಚ್ಚರಿಕೆ ನೀಡುತ್ತೇನೆ. ತಹಸೀಲ್ದಾರ ಕಚೇರಿಯ ಆವರಣದಲ್ಲಿಯೇ ಆಧಾರ್ ಸೇವಾ ಕೇಂದ್ರ ಪ್ರಾರಂಭಿಸಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು.

**– ವಾಸುದೇವ ಎಂ ಸ್ವಾಮಿ.**
ತಹಸೀಲ್ದಾರರು, ಲಕ್ಷ್ಮೇಶ್ವರ.

ಬೇಕಾಬಿಟ್ಟಿಯಾಗಿ ಹಣ ವಸೂಲಿ ಮಾಡುವ ಕೇಂದ್ರಗಳ ಯಾರೊಬ್ಬರ ವಿರುದ್ಧ ಕ್ರಮವೂ ಇಲ್ಲ ಮತ್ತು ಇವುಗಳ ಮೇಲೆ ನಿಯಂತ್ರಣ, ಪರಿಶೀಲನೆಯೂ ಇಲ್ಲದಿರುವುದು ಸಾರ್ವಜನಿಕರ ಅನುಮಾನಕ್ಕೆ ಕಾರಣವಾಗಿದೆ. ಹೆಚ್ಚುವರಿ ಹಣ ವಸೂಲಿ ಮಾಡುವ ಕೆಲ ಸೇವಾ ಕೇಂದ್ರಗಳಿಂದ ಕೆಲವು ಸಂಘಟನೆ ಮತ್ತು ಪತ್ರಕರ್ತರೆಂದು ಕೆಲವರು ಹಣ ವಸೂಲಿ ಮಾಡಿ ಕುಮ್ಮಕ್ಕು ನೀಡುತ್ತಿದ್ದಾರೆ. ಬಡವರ ಅನಿವಾರ್ಯತೆ, ಅಸಹಾಯಕತೆ, ಶಿಕ್ಷಣ ಮತ್ತು ಮಾಹಿತಿ ಕೊರತೆಯನ್ನು ಅಸ್ತ್ರವಾಗಿಸಿಕೊಂಡು ಹೆಚ್ಚುವರಿ ಹಣ ಸುಲಿಗೆ ಮಾಡುತ್ತಿರುವ ಸೇವಾ ಕೇಂದ್ರಗಳ ಮೇಲೆ ಒಂದು ಝುರಾಕ್ಸ್ ಪ್ರತಿಗೆ 10-20 ರೂ ಪಡೆಯುವ ವ್ಯವಸ್ಥೆ ಮೇಲೆ ಇನ್ನಾದರೂ ತಹಸೀಲ್ದಾರ ಸೇರಿ ಸಂಬಂಧಪಟ್ಟ ಅಧಿಕಾರಿಗಳು ನಿಗಾವಹಿಸುತ್ತಾರೇಯೇ ಕಾದು ನೋಡಬೇಕಿದೆ.

# ಇಲಿ ಜ್ವರ ತಡೆಗಟ್ಟುವಿಕೆ: ಬೀದಿ ನಾಟಕ ಮೂಲಕ ಜನಜಾಗೃತಿ



■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಜಿಲ್ಲಾ ಸಮೀಕ್ಷಣಾ ಘಟಕ ವತಿಯಿಂದ ನಗರದ ಪಂಡಿತ ಪುಟ್ಟರಾಜ ಬಸ್ ನಿಲ್ದಾಣ ಶನಿವಾರದಂದು ಇಲಿ ಜ್ವರ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕುರಿತು ಅಡವಿಸೋಮಾಪುರದ ಸಿದ್ಧಲಿಂಗೇಶ್ವರ ಜಾನಪದ ಕಲಾ ತಂಡ ಇವರ ನೇತೃತ್ವದಲ್ಲಿ ಬೀದಿ ನಾಟಕ/ಜಾನಪದ ಸಂಗೀತದ ಮೂಲಕ ಜನಜಾಗೃತಿ ಮೂಡಿಸಲಾಯಿತು.

ಜಿಲ್ಲಾ ಸಮೀಕ್ಷಣಾಧಿಕಾರಿ ಡಾ.ವೆಂಕಟೇಶ್ ರಾಠೋಡ ಮಾತನಾಡಿ, ಇಲಿಜ್ವರ ಒಂದು ಬ್ಯಾಕ್ಟೀರಿಯಾದಿಂದ ಉಂಟಾಗುವ ಕಾಯಿಲೆಯಾಗಿದ್ದು, ಇದಕ್ಕೆ ಯಾರೂ ಭಯ ಪಡುವ ಅಗತ್ಯವಿಲ್ಲ. ಇದಕ್ಕೆ ನಿಖರವಾದ ಚಿಕಿತ್ಸೆ ಇದ್ದು, ಲಕ್ಷಣಗಳು ಕಂಡ ಕೂಡಲೇ ಹತ್ತಿರದ ಸರಕಾರಿ ಆಸ್ಪತ್ರೆಗೆ ಧಾವಿಸಿ ಚಿಕಿತ್ಸೆ ಪಡೆಯಬಹುದು ಎಂದು ತಿಳಿಸಿದರು.

ಸಿದ್ಧಲಿಂಗೇಶ್ವರ ಕಲಾತಂಡ ವೀರಣ್ಣ ಮತ್ತು ಸಂಗಡಿಗರಿಂದ ಬೀದಿ ನಾಟಕ/ಸಂಗೀತದ ಮೂಲಕ ಜನರಿಗೆ ಇಲಿಜ್ವರ ಹರಡುವ ಬಗ್ಗೆ, ಲಕ್ಷಣಗಳು ಹಾಗೂ ನಿಯಂತ್ರಣಗಳ ಬಗ್ಗೆ ಜನರಿಗೆ ಮಾಹಿತಿ ನೀಡಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಎಪಿಡೆಮಿಯೋಲಾಜಿಸ್ಟ್ ಡಾ.ಪ್ರವೀಣ ನಿಡಗುಂದಿ, ಮೈಕ್ರೋಬಯೋಲಾಜಿಸ್ಟ್ ಪ್ರತೀಕ್ ಹುರಕಡ್ಲಿ, ರಮೇಶ್ ಅರಹುಣಸಿ, ಎಮ್.ಎಸ್.ರಬ್ಬನಗೌಡ್ರ, ವಿರೇಶ್ ಮದಕಟ್ಟಿ ಹಾಗೂ ಜಿಲ್ಲಾ ಸಮೀಕ್ಷಣಾ ಘಟಕದ ಸಿಬ್ಬಂದಿ ಹಾಜರಿದ್ದರು.

# ‘ಸಂವಿಧಾನ ಜಾಗೃತಿ ಜಾಥಾ’: ಸಮಾನತೆಯೇ ನಮ್ಮ ಸಂವಿಧಾನದ ಸೌಂದರ್ಯ

■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ದೇಶದ ಸಂವಿಧಾನ ಅಂಗೀಕಾರಗೊಂಡು 75 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ಸಂವಿಧಾನದ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಜ.26ರಿಂದ ಆರಂಭವಾಗಿರುವ ‘ಸಂವಿಧಾನ ಜಾಗೃತಿ ಜಾಥಾ’ ಸೋಮವಾರ ಪಟ್ಟಣಕ್ಕೆ ಆಗಮಿಸಿತು.

ತಾಲೂಕಿನ ಕುಂಟೋಜಿ ಗ್ರಾಮದಿಂದ ಆಗಮಿಸಿದ ಸಂವಿಧಾನ ಜಾಗೃತಿ ಜಾಥಾವನ್ನು ಸ್ಥಳೀಯ ಚನ್ನಮ್ಮ ವೃತ್ತದಲ್ಲಿ ಅದ್ದೂರಿಯಾಗಿ ಸ್ವಾಗತಿಸಲಾಯಿತು. ಬಳಿಕ ಇಲ್ಲಿನ ಕಾಲಕಾಲೇಶ್ವರ ವೃತ್ತದ ಬಳಿಯ ಜೋಡು ರಸ್ತೆಯಲ್ಲಿ ತಾಲೂಕಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ನಡೆದ ವೇದಿಕೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತಹಸೀಲ್ದಾರ್ ಕಿರಣಕುಮಾರ ಕುಲಕರ್ಣಿ ಮಾತನಾಡಿ, ಸಮಾನತೆಯೇ ನಮ್ಮ ಸಂವಿಧಾನದ ಸೌಂದರ್ಯವಾಗಿದೆ ಎಂದರು.



ಶರಣು ಪೂಜಾರ ಮಾತನಾಡಿ, ದೇಶವು ಆಂಗ್ಲರ ಆಡಳಿತದಿಂದ ಮುಕ್ತವಾದ ಬಳಿಕ ದೇಶದ ನಿವಾಸಿಗಳೆಲ್ಲರೂ ಸಮಾನರು ಎಂಬ ಸಂದೇಶವನ್ನು ನೀಡಿ ದೀನ-ದಲಿತರ ಹಾಗೂ ಶೋಷಿತರ ಬಾಳಿನಲ್ಲಿ ಬೆಳಕು ನೀಡಿದ್ದು ಡಾ.ಬಿ.ಆರ್. ಅಂಬೇಡ್ಕರ. ಹೀಗಾಗಿ ಸಂವಿಧಾನ ಎಂಬುದು ನಮ್ಮೆಲ್ಲರ ಶಕ್ತಿಯಾಗಿದೆ ಎಂದ ಅವರು, ಈ ಶಕ್ತಿಯನ್ನು ಕಸಿಯುವ ಕೆಲಸಕ್ಕೆ ಕೈ ಹಾಕುವವರ ವಿರುದ್ಧ ನಾವು ಎಚ್ಚರಿಕೆಯಿಂದ ಇದ್ದು, ಡಾ.ಅಂಬೇಡ್ಕರರ ವಿಚಾರಧಾರೆಗಳನ್ನು ಮೈಗೂಡಿಸಿಕೊಂಡು ಸಂವಿಧಾನ ರಕ್ಷಣೆ ಮಾಡಿಕೊಳ್ಳೋಣ ಎಂದರು.

ಪುರಸಭೆ ಸದಸ್ಯ ಶಿವರಾಜ ಘೋರ್ಪಡೆ ಮಾತನಾಡಿದರು. ಪುರಸಭೆ ಸ್ಥಾಯಿ ಸಮಿತಿ ಚೇರಮನ್ ಕನಕಪ್ಪ ಅರಳಿಗಿಡದ, ವಿಪಕ್ಷ ನಾಯಕ ಮುರ್ತುಜಾ ಡಾಲಾಯತ್, ಸದಸ್ಯರಾದ ವೀರಪ್ಪ ಪಟ್ಟಣಶೆಟ್ಟಿ, ವೆಂಕಟೇಶ ಮುದಗಲ್, ರಾಜು ಸಾಂಗ್ಲೀಕರ, ರೂಪೇಶ ರಾಠೋಡ ಹಾಗೂ ಬಸವರಾಜ ಬಂಕದ, ಶ್ರೀಧರ ಬಿದರಳ್ಳಿ, ಯಲ್ಲಪ್ಪ ಬಂಕದ, ದುರಗಪ್ಪ ಮುಧೋಳ, ರವಿ ಗಡೇದವರ, ಸಿದ್ದಪ್ಪ ಚೋಳಿನ, ಪುರಸಭೆ ಪ್ರಭಾರಿ ಮುಖ್ಯಾಧಿಕಾರಿ ಬಸವರಾಜ ಬಳಗಾನೂರ ಸೇರಿದಂತೆ ದಲಿತಪರ ಸಂಘಟನೆಗಳ ಮುಖಂಡರು, ಪ್ರಗತಿಪರ ಚಿಂತಕರು ಮುಂತಾದವರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka